SRI M. Y. GHORPADE :—Madam, I beg to introduce the Karnataka Appropriation (No. 2) Bill, 1975.

MADAM SPEAKER :—The Bill is introduced **

Motion to Consider

SRI M. Y. GHORPADE :—Madam, I beg to move—

"That the Karnataka Appropriation (*No.* 2) Bill, 1975 be taken into consideration".

MADAM SPEAKER.—Motion moved.—

"That the Karnataka Appropration (No. 2) Bill, 1975 be taken into consideration".

†ಶ್ರೀ ಕೆ. ಹೆಚ್. ಹನುಮೇಗೌಡ :— (ಹಾಸನ) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕಂಥ ಅಪ್ರೊಪ್ರಿಯೇಷನ್ ಬಿಲ್ಲನ್ನು ವಿರೋಧಿಸಿ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ ಇದೇ ಸಮಯದಲ್ಲಿ ರೂರಲ್ ಡೆವಲಪಮೆಂಟ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸಾವಿರಾರು ಹಳ್ಳಿಗಳ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರದವರು 1955ರಲ್ಲಿ ಒಂದು ಸಮಗ್ರ ಯೋಜನೆಯನ್ನು ಕೈಕೊಂಡರು. ರಾಷ್ಟ್ರೀಯ ವಿಸ್ತರಣಾ ಯೋಜನೆ ಎಂಬ ಹೆಸರಿನಲ್ಲಿ ಒಂದು ಯೋಜನೆಯನ್ನು ಜಾರಿಗೆ ತಂದು, ಈ ರಾಜ್ಯದಲ್ಲಿ ಕೆಲವು ಬ್ಲಾಕ್‌ಗಳನ್ನು ಮಾಡಿ, ಪ್ರತಿಯೊಂದು ಬ್ಲಾಕಿಗೂ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟರು. ಗ್ರಾಮಾಂತರ ಪ್ರದೇಶದ ರಸ್ತೆಗಳ ಬಗ್ಗೆ, ಕುಡಿಯುವ ನೀರಿನ ಪೂರೈಕೆಬಗ್ಗೆ, ಪಾಠಶಾಲೆ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಶಿಶು ಸಂರಕ್ಷಣೆಯ ಬಗ್ಗೆ, ಗ್ರಾಮ ನೈರ್ಮಲ್ಯದ ಬಗ್ಗೆ, ಹರಿಜನ ಮತ್ತು ಗಿರಿಜನರ ಕಲ್ಯಾಣದ ಬಗ್ಗೆ ಎಂದು ಈ ರೀತಿ ಅನೇಕ ಬಾಬುಗಳಿಗೆ ಖರ್ಚು ಮಾಡಲು ಲಕ್ಷಾಂತರ ರೂಪಾಯಿಗಳನ್ನು ಈ ಯೋಜನೆ ಪ್ರಾರಂಭವಾದ 5 ವರ್ಷಗಳವರೆಗೆ ಕೊಟ್ಟು ನಂತರ ನಿಲ್ಲಿಸಿಬಿಟ್ಟರು. ಈಗ ಏನಿದ್ದರೂ ಅಧಿಕಾರ ವರ್ಗದವರು ಮಾತ್ರ ಮುಂದುವರೆಯುತ್ತಿದ್ದಾರೆ. ಈಗ ಯಾವ ಕೆಲಸವೂ ಅಲ್ಲಿ ಪೂರ್ತಿಯಾಗದೆ

** Copies appended as Annexures to this volume

(ಶ್ರೀ ಕೆ. ಹೆಚ್. ಹನುಮೇಗೌಡ)

ಗ್ರಾಮಾಂತರ ಪ್ರದೇಶದ ಒಂದು ಅಭಿವೃದ್ಧಿ ಬಗ್ಗೆ ಕಂಟಕಪ್ರಾಯವಾದಂಥ ಕ್ರಮವನ್ನು ಈಗಿನ ಸರ್ಕಾರದವರು ಕೈಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇಂದು 8-10 ಸಾವಿರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳೇ ಇಲ್ಲ ಎಂಬುದು ಸರ್ಕಾರದವರು ಕೊಟ್ಟಿರುವ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಅದೇ ರೀತಿ ಗ್ರಾಮಾಂತರ ರಸ್ತೆಗಳ ನಿರ್ಮಾಣ ತೆಗೆದುಕೊಂಡರೆ, ಇಂದು ಪ್ರತಿಯೊಂದು ತಾಲ್ಲೂಕು ಬೋರ್ಡಿಗೂ ಸೇರಿದಂತೆ 200ರಿಂದ 500 ಹಳ್ಳಿಗಳಿವೆ. ಅವುಗಳಿಗೆ ಸಂಪರ್ಕ ರಸ್ತೆಗಳನ್ನು ಮಾಡಿಸುವ ಬಗ್ಗೆ ಈ ಮೊದಲು ಅಲ್ಪಸ್ವಲ್ಪ ಹಣ ಕೊಟ್ಟರು ಕೆಲವು ರಸ್ತೆಗಳಿಗೆ ಮಣ್ಣು ಹಾಕಿಸಿದರು, ಕೆಲವು ರಸ್ತೆಗಳಿಗೆ ಮೋರಿಗಳನ್ನು ಕಟ್ಟಿಸಿದರು, ಆದರೆ ಈ ಕೆಲಸವೂ ಸಹ ಪೂರ್ತಿಯಾಗಲಿಲ್ಲ; ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರೈಮರಿ ಶಾಲೆಗಳಿಗೆ ಕಟ್ಟಡವನ್ನು ಕಟ್ಟಿಸಬೇಕಾದ ಕೆಲವು ತಾಲ್ಲೂಕು ಬೋರ್ಡುಗಳಿಗೆ ಸೇರಿತ್ತು. ಅದರಂತೆ ಅವರು ಕೆಲವು ಶಾಲಾ ಕಟ್ಟಡಗಳನ್ನು ಕಟ್ಟಿಸಿದರು. ಆದರೆ ಎಲ್ಲ ಕಡೆಯೂ ಆ ಕೆಲಸ ಪೂರ್ತಿಯಾಗಲಿಲ್ಲ ಯಾವ ಯಾವ ಉದ್ದೇಶಕ್ಕೋಸ್ಕರ ಸರ್ಕಾರದವರು ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಕೈಕೊಂಡರೋ, ಆ ಯಾವ ಉದ್ದೇಶಗಳೂ ಸಹ ಪೂರ್ಣವಾಗಿ ಮುಗಿದಿಲ್ಲ. ಇದಕ್ಕೆ ಕಾರಣ ಸರ್ಕಾರದವರು ಈ ಬಾಬತ್ತು ಕೊಡುತ್ತಿದ್ದ ಹಣವನ್ನು ನಿಲ್ಲಿಸಿರುವುದು, ಈಗ ಏನಿದ್ದರು ಅಧಿಕಾರ ವರ್ಗ ಮಾತ್ರ ಮುಂದುವರೆಯುತ್ತಿದೆ. ಪ್ರತಿಯೊಂದು ಬ್ಲಾಕಿನಲ್ಲಿಯೂ 20-30 ಜನ ಅಧಿಕಾರಿಗಳಿದ್ದಾರೆ. ಇವರುಗಳು ಮಾಡುವುದಕ್ಕೆ ಯಾವ ಕೆಲಸವೂ ಇಲ್ಲದೆ ವಿನಾಕಾರಣ ಅಲೆದುಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದ ಕಲ್ಯಾಣಕ್ಕೋಸ್ಕರ ಕೈಗೊಂಡಿರತಕ್ಕಂಥ ಈ ಯೋಜನೆ ಏನಿದೆ, ಇದು ಪೂರ್ತಿಯಾಗುವವರೆಗೆ ಹಣ ಒದಗಿಸಿ, ಇಲ್ಲವೇ ಈ ಅಧಿಕಾರಿಗಳನ್ನು ಬೇರೆ ಕಡೆಗೆ ಕಳುಹಿಸಿ ಕೆಲಸ ಕಾರ್ಯ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡುಗಳು ಮತ್ತು ಪಂಚಾಯಿತಿ ಬಗ್ಗೆ ಹೇಳಬೇಕೆಂದರೆ, ಇವುಗಳ ಬಗೆ ಸರ್ಕಾರದವರು ಯಾವಾಗಲೂ ಪ್ರೋತ್ಸಾಹದ ಮಾತುಗಳನ್ನು ಆಡುತ್ತಾರೆ, ಉಪದೇಶ ಮಾಡುತ್ತಾರೆ, ಹಿತವಚನಗಳನ್ನು ನುಡಿಯುತ್ತಾರೆಯೇ ಹೊರತು, ಅವುಗಳು ಏನು ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ, ಆ ಕೆಲಸ ಕಾರ್ಯಗಳನ್ನು ಮಾಡಲು ಎಷ್ಟು ಹಣದ ಆವಶ್ಯಕತೆಯಿದೆ ಎಂಬುದನ್ನು ಮನಗುಂಡು, ಅದರಂತೆ ಹಣ ಕೊಡುತ್ತಿಲ್ಲ. ಇಂದು ತಾಲ್ಲೂಕು ಬೋರ್ಡಿಗೆ ಬರುತ್ತಿರುವ ಮುಖ್ಯವಾದ ಆದಾಯವೆಂದರೆ, ಭೂಕಂದಾಯದಿಂದ ಬರುವ ವರಮಾನದಲ್ಲಿ 60 ಪರ್ಸೆಂಟನ್ನು ಸರ್ಕಾರದವರು ಕೊಡುತ್ತಾರೆ, ಉಳಿದ 40 ಪರ್ಸೆಂಟ್‌ನ್ನು ಪಂಚಾಯಿತಿಗಳಿಗೆ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನುಗಳು

ಕ್ರಮಾಂಕ No...........
Karnataka Legislature Library.

ಮೊರಾಟವಾದಾಗ ರಿಜಿಸ್ಟ್ರೇಷನ್ ಖರ್ಚಿನ ಮೂಲಕ ಸರ್ಕಾರಕ್ಕೆ ಏನು ಆದಾಯ ಬರುತ್ತದೆ, ಅದರಲ್ಲಿ 60-70 ಪರ್ಸೆಂಟನಷ್ಟನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತಾರೆ. ಜೊತೆಗೆ ಸಂತೆ ಸುಂಕದಿಂದ 15-20 ಸಾವಿರ ರೂಪಾಯಿಗಳಷ್ಟು ಆದಾಯ ಬರುತ್ತದೆ. ಇದೆಲ್ಲವನ್ನೂ ಸೇರಿಸಿದರೆ ತಾಲ್ಲೂಕು ಬೋರ್ಡಿನ ಆದಾಯ 2 ಲಕ್ಷ ರೂಪಾಯಿಗಳಿಗೆ ಮೀರುವುದಿಲ್ಲ. ಇಷ್ಟೇ ಹಣದಲ್ಲಿ ಆ ತಾಲ್ಲೂಕು ಬೋರ್ಡಿಗೆ ಸೇರಿದ ನೂರಾರು ಹಳ್ಳಿಗಳಿಗೆ ಸಂಬಂಧಪಟ್ಟಂತಹ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ಒಂದು ಜವಾಬ್ದಾರಿಯನ್ನು ಸರ್ಕಾರ ಅವರ ಮೇಲೆ ವಹಿಸಿದೆ ಎಂದರೆ ತಪ್ಪಾಗಲಾರದು. ಸಮಾಜ ಕಲ್ಯಾಣ ಮತ್ತು ಗ್ರಾಮಾಭಿವೃದ್ಧಿ ಮಂತ್ರಿಗಳು ಈ ಪಂಚಾಯಿತಿಗಳ ಬಗ್ಗೆ ಮತ್ತು ತಾಲ್ಲೂಕು ಬೋರ್ಡುಗಳ ಬಗ್ಗೆ ಆಡತಕ್ಕಂಥ ಮಾತುಗಳು ಮತ್ತು ಅವುಗಳಿಗೆ ಕೊಡುತ್ತಿರುವ ಉತ್ತೇಜನವನ್ನು ನೋಡಿದರೆ ಹಿಂದೆ ತೆನ್ನಾಲಿ ರಾಮಕೃಷ್ಣ ಕುದುರೆ ಸಾಕಿದ ಕಥೆ ಜ್ಞಾಪಕಕ್ಕೆ ಬರುತ್ತದೆ. ಆ ಕುದುರೆಯ ಮೈಯನ್ನು ಜಜ್ಜಲು ಒಬ್ಬ ಆಳನ್ನು ಇಟ್ಟಿದ್ದನಂತೆ. ನೀರನ್ನು ಎಷ್ಟು ಬೇಕಾದರೂ ಕುಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದನಂತೆ. ಆದರೆ ಹುಲ್ಲನ್ನು ಮಾತ್ರ ಒಂದು ಹಿಡಿಯಷ್ಟು ಮಾತ್ರ ಹಾಕಿ ಕುದುರೆಯನ್ನು ನಾನು ಬಹಳ ಚೆನ್ನಾಗಿ ಸಾಕಿದ್ದೇನೆ, ಚೆನ್ನಾಗಿ ನೋಡಿಕೊಳ್ಳುತ್ತಿದ್ದೇನೆಂದು ಹೇಳುತ್ತಿದ್ದನಂತೆ. ಇಷ್ಟೆಲ್ಲಾ ಮಾಡಿದರೂ ಸಹ ಅದು ದಷ್ಟಪುಷ್ಟವಾಗಿ ಬೆಳೆಯದಿರುವುದಕ್ಕೆ ಕಾರಣವೇನು ಎಂದು ಒಂದು ದಿವಸ ಆತನ ಬಳಿ ಬಂದ ಗಡ್ಡದವರೊಬ್ಬರಿಗೆ ಕೇಳಿದಾಗ, ಆ ಗಡ್ಡದವರು ಅದನ್ನು ನೋಡಲು ಹೋದರಂತೆ. ಆಗ ಆ ಕುದುರೆ ಹಸಿವಿನಿಂದ ಅವರ ಗಡ್ಡವನ್ನೇ ಹಿಡಿದುಕೊಂಡಾಗ, ಅವರು ಉಪಾಯದಿಂದ ಬಿಡಿಸಿಕೊಂಡ ಕಾರಣ ಅವರ ಪ್ರಾಣಕ್ಕೇನೂ ಅಪಾಯವಾಗಲಿಲ್ಲವಂತೆ. ಆ ಒಂದು ಕುದುರೆಯ ಸ್ಥಿತಿಯೇ ಇಂದು ಪಂಚಾಯಿತಿಗಳಿಗೆ ಮತ್ತು ತಾಲ್ಲೂಕ್ ಬೋರ್ಡುಗಳಿಗೆ ಬಂದಿದೆ ಎಂದು ಹೇಳಬಹುದು. ಇಂದು ಗ್ರಾಮಾಂತರ ಪ್ರದೇಶಗಳಿಗೆ ಯಾವ ಮಂತ್ರಿಯೇ ಬರಲಿ, ಆ ಜನರು ತಮ್ಮ ಹೊಟ್ಟೆಗೆ ಇಲ್ಲ ದಿದ್ದರೂ ಸಹ ಮಂತ್ರಿಗಳಿಗೆ ಹಾರ ಹಾಕಿ ತಮಟೆ ಬಡಿಯುತ್ತಾರೆ. ಮಂತ್ರಿಗಳು ಪ್ರವಾಸ ಬಂದಾಗಲೆಲ್ಲಾ ಚಪ್ಪರ ಹಾಕಲು, ತೋರಣ ಕಟ್ಟಲು ಮಾವಿನ ಎಲೆ ಗಳನ್ನು ಕಿತ್ತು ಕಿತ್ತೂ ಮಾವಿನ ಮರಗಳೆಲ್ಲಾ ನಿರ್ನಾಮವಾಗಿ ಬಿಟ್ಟಿವೆ ಮಂತ್ರಿ ಗಳು ಬಂದಾಗಲೆಲ್ಲಾ ಏನು ಹೇಳುತ್ತಾರೆಂದರೆ, ನೀವೇ ಸ್ವಂತವಾಗಿ ಎಲ್ಲ ಕೆಲಸಗಳನ್ನು ಮಾಡಿಕೊಳ್ಳಬೇಕು, ಸರ್ಕಾರವನ್ನು ಯಾವುದಕ್ಕೂ ಅವಲಂಬಿಸ ಬಾರದೆಂದು ಅವರ ಮನಸ್ಸಿಗೆ ಬಂದಷ್ಟು ಉಪದೇಶ ಮಾಡುತ್ತಾರೆ. ಕೆಲವು ಕೆಲಸ ಕಾರ್ಯಗಳನ್ನು ಕೈಕೊಳ್ಳಲು ಸರ್ಕಾರದಿಂದ ಸಾಕಷ್ಟು ಧನ ಸಹಾಯ ಬರುತ್ತಿಲ್ಲವೆಂದು ಹೇಳಿದರೆ, ತಾಲ್ಲೂಕಿನಿಂದ ಬರುವ ಭೂಕಂದಾಯವನ್ನೆಲ್ಲಾ ನಿಮಗೇ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ನಾನು ಸರ್ಕಾರಕ್ಕೆ ಕೇಳು

(ಶ್ರೀ ಕೆ. ಹೆಚ್. ಹನುಮೇಗೌಡ)

ತ್ತೇನೆ, ಏನೆಂದರೆ, ಸರ್ಕಾರಕ್ಕೆ ಅದು ಒಂದು ಬಾಬಿನಿಂದ ಮಾತ್ರ ಆದಾಯ ಬರುತ್ತದೆಯೇ ಎಂದು.

3-30 P. M.

ಅವರು ಕೊಂಡುಕೊಳ್ಳತಕ್ಕ ಬಟ್ಟೆಯಮೇಲೆ ಟ್ಯಾಕ್ಸ್ ಕೊಡುತ್ತಿದ್ದಾರೆ. ಪ್ರತಿಯೊಂದು ಬಾಬಿಗೂ ದುಡ್ಡು ಕೊಡುತ್ತಾರೆ. ಹೀಗೆ ಭೂಕಂದಾಯದಲ್ಲಿ ಕೆಲವು ಭಾಗಗಳನ್ನು ಗ್ರಾಮಪಂಚಾಯತಿಗಳು ಅಭಿವೃದ್ಧಿಕಾರ್ಯಗಳಿಗೆ ಉಪಯೋಗಿಸಿಕೊಳ್ಳಲಿಕ್ಕೆ ಕೊಡುತ್ತಾರೆ. ಅದೇರೀತಿ ಬೇರೆ ಬೇರೆ ಇಲಾಖೆಗಳಿಂದ ಅಂದರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಿಂದ ಬರತಕ್ಕ 100ಕ್ಕೆ 90 ಭಾಗ ಅಂದರೆ ಇದರಿಂದ 55 ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಸರ್ಕಾರಕ್ಕೆ ಬರುತ್ತದೆ ಈ ದುಡ್ಡಿನಲ್ಲಿ ಕೆಲವು ಭಾಗವನ್ನು ಪಂಚಾಯತಿಗಳಿಗೆ ಮತ್ತು ತಾಲೂಕುಬೋರ್ಡ್‌ಗಳಿಗೆ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಸೇಲ್ಸ್ ಟ್ಯಾಕ್ಸ್‌ನ ಪ್ರತಿ ಬಾಬಿನಿಂದಲೂ 100ಕ್ಕೆ 90 ಭಾಗ ಏನು ಸರ್ಕಾರಕ್ಕೆ ಆದಾಯವಿದೆಯೋ ಅದು ಕೂಡ ಗ್ರಾಮಾಂತರ ಪ್ರದೇಶದ ರೈತರು ಕೊಡುವುದೇ ಆಗಿರುತ್ತದೆ. ಆದ್ದರಿಂದ ಅವರ ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕ ರಸ್ತೆ ಸಂಪರ್ಕ, ಮಕ್ಕಳು ಓದತಕ್ಕ ಪಾಠಶಾಲೆಗಳ ಕಟ್ಟಡ ಕುಡಿಯುವ ನೀರಿನ ಭಾವಿಗಳನ್ನು ತೋಡಿಸುವ ಬಗ್ಗೆ, ಶಿಶುಗಳ ಯೋಗಕ್ಷೇಮ, ಎಲ್ಲಕ್ಕಿಂತಲೂ ಹೆಚ್ಚಾಗಿ ಹರಿಜನೋದ್ಧಾರ ಇವುಗಳಿಗೆಲ್ಲ ಎಷ್ಟು ಖರ್ಚುಮಾಡುತ್ತಿದ್ದಾರೆಂದು ಕೇಳಬೇಕಾಗುತ್ತದೆ. ಈ ಎಲ್ಲ ಕೆಲಸ ಕಾರ್ಯಗಳಿಗೂ ಕೊಡತಕ್ಕ ಅತ್ಯಲ್ಪ ಹಣದಲ್ಲಿ ಯಾವವಿದವಾದ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ. ಸ್ವಾತಂತ್ರ್ಯ ಬಂದು 27-28 ವರ್ಷಗಳಾದರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿದ್ದ ಅಭಿವೃದ್ಧಿ ಕಾರ್ಯಗಳೂ ಇನ್ನೂಕೂಡ ಆಗಿಲ್ಲ. ಪಟ್ಟಣಗಳಲ್ಲಿ ಮಾತ್ರ ಮಾಡಿಕೊಂಡುಬಂದಿದ್ದೀರಿ ಎಂದರೆ ನಾಚಿಕೆಗೇಡಿನ ಮಾತು, 9,10 ಸಾವಿರ ಹಳ್ಳಿಗಳಲ್ಲಿ ಈಗಲೂ ಕೂಡ ಕುಡಿಯುವ ನೀರಿನ ವ್ಯವಸ್ಥೆಯೂಗಿಲ್ಲವೆಂದರೆ ಅವರು ಎಷ್ಟೊಂದು ನಿರ್ಭಾಗ್ಯರು, ಹತಭಾಗ್ಯರೆಂದು ಹೇಳಬೇಕಾಗುತ್ತದೆ. ತಮಗೆ ಅಷ್ಟೊಂದು ಆಶಯವಿದ್ದರೆ, ಶ್ರದ್ಧೆ ಇದ್ದರೆ ಮಾಡಲೇಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಬೇರೆ ಒಂದು ಸಮಗ್ರವಾದ, ರಾಷ್ಟ್ರೀಯ ರೀತಿಯಲ್ಲಿ ಯೋಜನೆಯನ್ನಾದರೂ ಮಾಡಿ ಕನಿಷ್ಟಪಕ್ಷ ಇಷ್ಟು ವರ್ಷದೊಳಗೆ, ಶಾಲಾ ಕಟ್ಟಡಗಳು, ರಸ್ತೆಗಳು, ಹರಿಜನ ಗಿರಿಜನರ ಉದ್ಧಾರ, ಗ್ರಾಮ ನೈರ್ಮಲ್ಯ ಇವೇ ಮೊದಲಾದ ಗ್ರಾಮಾಂತರ ಪ್ರದೇಶಗಳ ಸರ್ವತೋಮುಖವಾದ ಅಭಿವೃದ್ಧಿಗೆ

ಪ್ರಯತ್ನ ಮಾಡಬೇಕು. ಅದಕ್ಕೆ ಸಾಕಷ್ಟು ಹಣವನ್ನು ಅವರಿಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಬಜೆಟ್‌ನಲ್ಲಿ ಹೆಳಿದ್ದೇರಿ ಮಾನ್ಯ ಅರ್ಥಸಚಿವರು ಒಂದೂವರೆ ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಬಾವಿಗಳನ್ನು, ತೋಡುವುದಕ್ಕೆ ಮತ್ತು ಇರತಕ್ಕ ಬಾವಿಗಳನ್ನು ಆಳವಡಿಸುವುದಕ್ಕೆ ಒದಗಿಸಿದ್ದೇವೆಂದು ಹೇಳಿದ್ದಾರೆ. ಎಲ್ಲಿ ನೀರು ಬರುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿ ನೀರು ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿಯೇ ಒಂದು ಕಮಿಟಿಯನ್ನು ಮಾಡಿ 45 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿರುತ್ತೇವೆಂದು ಹೇಳಿರುತ್ತೀರಿ, ಆದರೆ ತಕ್ಷಣ ಪ್ರೋಗ್ರೆಸ್ ಆಗುವ ರೀತಿಯಲ್ಲಿ ದುಡ್ಡನ್ನು ರಿಲೀಸ್ ಮಾಡಿಲ್ಲ. ಸಂಪರ್ಕ ಕೆಲಸಗಳು ನಡೆಯುತ್ತಾ ಇಲ್ಲ. ಬೋರ್‌ವೆಲ್ಸ್ ಹಾಕುವ ವಿಚಾರದಲ್ಲಿ 27 ರಿಗ್ಸ್ ಯಂತ್ರಗಳು ಬಂದಿದ್ದರೂ ಇಪ್ಪತ್ತೇಳರಲ್ಲಿ ವಿಶೇಷವಾಗಿ ತಾವು ತಮ್ಮ ಜನ ಇರುವ ಕಡೆ ಉಪಯೋಗಿಸಿಕೊಂಡಿದ್ದೀರಿ. ನತದೃಷ್ಟ ಜನ ಇರುವ ಕಡೆ ತಮ್ಮ ಗಮನ ಹೋಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಒಂದು ಮಾತನ್ನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾಲ್ಕು ಜಿಲ್ಲೆಗಳಲ್ಲಿ ಅಂದರೆ ಮಂಡ್ಯ ಮೈಸೂರು ಹಾಸನ ಮತ್ತು ಚಿಕ್ಕಮಗಳೂರು ಕೆಲವು ಭಾಗಗಳಲ್ಲಿ ಮತ್ತು ಮಾನ್ಯ ಕೃಷ್ಣಪ್ಪನವರು ಹೇಳಿದರು, ನಾಗಮಂಗಲದ ಕೆಲವುಭಾಗಗಳಲ್ಲಿ ಕುಡಿಯುವ ನೀರಿಗಾಗಿ ಅಸಾಧ್ಯ ತೊಂದರೆಗಳನ್ನು ಪಡುತ್ತಿದ್ದಾರೆಂದು ತಿಳಿಸಿದ್ದಾರೆ. ಪ್ರತಿಯೊಂದಕ್ಕೂ ತಾವು ರಾಜಕೀಯ ಮಾಡಿಕೊಂಡು, ಇಪ್ಪತ್ತೇಳು ರಿಗ್ ಮಿಶನ್‌ಗಳನ್ನು ತಮಗೆ ಬೇಕಾದ ಕಡೆಗೆ ಕಳುಹಿಸಿಕೊಂಡು ರಾಜಕೀಯ ಮಾಡಿಕೊಂಡು, ಅಸಹಾಯಕ ಜನರಿಗೆ ಅನೇಕ ವಿದವಾದ ತೊಂದರೆಗಳನ್ನು ಕೊಡುತ್ತಾ ಇದ್ದೀರಿ. ಇದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಕುಡಿಯುವ ನೀರಿನ ತೊಂದರೆ ಎಲ್ಲಿ ಇದೆಯೋ ಅಲ್ಲಿಗೆ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ಅ ರಿಂದ ರಿಪೋರ್ಟ್ ತರಿಸಿಕೊಂಡು ಕನಿಷ್ಟ ಪಕ್ಷ ಆರು ತಿಂಗಳೊಳಗೆ, ಒಂದು ವರ್ಷದೊಳಗೆ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾತಂತ್ರ ಬಂದು 27, 28 ವರ್ಷಗಳಾದರೂ ಕೂಡ ಜನಗಳಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಹೊಟ್ಟೆಗೆ ಅನ್ನ ಕೊಡುವುದಕ್ಕೆ ಸಾಧ್ಯವಾಗಲಿಲ್ಲ, ಕೊನೆಯಪಕ್ಷ ಕುಡಿಯುವ ನೀರನ್ನಾದರೂ ಒದಗಿಸುವ ದೃಷ್ಟಿಯನ್ನು ಇಟ್ಟುಕೊಂಡು ಒಂದು ಯೋಜನೆಯನ್ನು ಮಾಡಿ ಎಲ್ಲೆಲ್ಲಿ ಬಾವಿಗಳನ್ನು ತೋಡಿಸಲು ಸಾಧ್ಯವೋ ಅಲ್ಲಿ ಬಾವಿಗಳನ್ನು ತೋಡಿಸಿ. ಸಾಧ್ಯವಿಲ್ಲದ ಕಡೆ ಬೋರ್‌ವೆಲ್‌ಗಳನ್ನು ತೋಡುವ ಪ್ರಯತ್ನವನ್ನು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೆಲವು ಜಿಲ್ಲೆಗಳಲ್ಲಿ ನಾನು ಕಿವಿಯಾರೆ ಕೇಳಿದ್ದೇನೆ, ಕುಡಿಯುವ ನೀರಿನ ಬಾವಿಗಳಿದ್ದರೂ ಕೂಡ ಯಾರು ಯಾರೋ ದಾಕ್ಷಿಣ್ಯಕ್ಕೆ ಒಳಗಾಗಿ

(ಶ್ರೀ ಕೆ. ಹೆಚ್. ಹನುಮೇಗೌಡ)

ಅಂತಕಡೆ ಹೋಗಿ ಬೋರ್ ಹಾಕಿದ್ದೀರಿ. ನೀರು ಇಲ್ಲದಕಡೆ ಬೋರ್ ಹಾಕಿಲ್ಲ. ಅಧಿಕಾರ ಬಹಳ ದಿವಸ ಶಾಶ್ವತವಾಗಿ ಇರುವುದಿಲ್ಲ. ಬೇಗಬೇಗ ಕಳೆದುಹೋಗುತ್ತದೆ. ಅಧಿಕಾರವನ್ನು ಕಳೆದು ಕುಳಿತುಕೊಂಡಾಗ ನಿಮ್ಮ ಅಂತರಾತ್ಮವನ್ನು ಅಧಿಕಾರದಲ್ಲಿದ್ದಾಗ ಏನೇನು ಒಳ್ಳೆಯ ಕೆಲಸಮಾಡಿದೆ ಎಂದು ಕೇಳಿದಾಗ ಇಂಥಿಂಥ ಒಳ್ಳೆಯ ಕೆಲಸವನ್ನು ಮಾಡಿದ್ದೇನೆಂದು ಹೇಳಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ರಾಚಯ್ಯನವರು ಇದನ್ನೆಲ್ಲ ಡೆವಲಪ್ ಮಾಡಬೇಕೆಂದು ಈ ಸಂರ್ಧದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ ಬೋರ್ ಹಾಕಿದ್ದಾರೆ ಒಂದೊಂದು ಬೋರ್‌ಗೆ 15, 15 ಸಾವಿರ ರೂಪಾಯಿಗಳು ಬೀಳುತ್ತವೆ, ಹ್ಯಾಂಡ್ ಪಂಪ್ಸ್ ಹಾಕಿದ್ದಾರೆ. ಒಂದೊಂದು ಹ್ಯಾಂಡ್ ಪಂಪ್‌ಗೆ 750 ರೂಪಾಯಿಗಳಾಗುತ್ತದೆ. ಇದನ್ನು ನೋಡಿಲ್ಲ ಎಂದು ಕಾಣುತ್ತದೆ. ನಮ್ಮ ಕಡೆಗೆ ಹೋದಸಾರಿ 15, 20 ಹ್ಯಾಂಡ್ ಪಂಪ್‌ಗಳನ್ನು ಹಾಕಿದ್ದಾರೆ ಆದರೂ ಕೂಡ ಬಾವಿಯಲ್ಲಿ ನೀರು ತೆಗೆಯುತ್ತಾ ಇಲ್ಲ. ನಿರ್ಮಲ ಇಂಜಿನೀಯರಿಂಗ್ ಕಂಪನಿಯವರಿಗೆ ಬಹಳ ಪ್ರೋತ್ಸಾಹ ಕೊಡುತ್ತಿದ್ದೀರಿ. ಅವರು ಇಡೀ ದೇಶಕ್ಕೆ ದ್ರೋಹ ಮಾಡಿದ್ದಾರೆ. 15,20 ಸಾವಿರ ರೂಪಾಯಿ ಖರ್ಚು ಮಾಡಿ ಬಾವಿ ತೆಗೆದಮೇಲೆ ಕನಿಷ್ಟಪಕ್ಷ ಆರು ತಿಂಗಳು ನೀರು ಕುಡಿಯುವುದಕ್ಕೆ ಬರದೆ ಹೋದರೆ ಏನು ಪ್ರಯೋಜನ. ಯಾರದೋ ಮರ್ಜಿಗೆ ಒಳಗಾಗಿ 5,10 ಪರ್ಸೆಂಟ್ ಹೊಡೆಯುವ ಕೆಲಸ ಮಾಡಿ ಜನಗಳಿಗೆ ಕಣ್ಣೀರು ಇಡುವಹಾಗೆ ಮಾಡಿದ್ದಾರೆ, ಈ ವಿಚಾರವನ್ನು ಯಾರೊ ಒಬ್ಬರು ಹೇಳಿದರು. ಅದನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎನ್. ರಾಚಯ್ಯ :—ನಾವು ಯಾವತ್ತೂ ಹಾಗ ಮಾಡಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ :—ಯಾರು ಮಾಡಿದರೋ ಅದರ ಫಲ ಪಡೆಯಲೇಬೇಕಾಗುತ್ತದೆ. ಪಂಜಾಬ್ ದೇಶದಲ್ಲಿ ಕುಡಿಯುವ ನೀರಿಗೆ ತೊಂದರೆಯಾದಾಗ ಒಂದೆರಡು ಮನೆಗಳು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಪಂಪ್‌ಗಳನ್ನು ಒದಗಿಸುತ್ತಾರೆ. ಅದರ ಬೆಲೆ 750 ರೂಪಾಯಿಗಳೆಂದು ಕೇಳಿರುತ್ತೇನೆ. ಪಂಪ್‌ಗಳನ್ನು ಕೊಟೇಶನ್ ಕಾಲ್‌ಫರ್ ಮಾಡಿ ಒದಗಿಸುತ್ತಾರೆ. ತಾವು ಓಪನ್ ವೆಲ್‌ಗಳ ಬಗ್ಗೆ ಹೇಳಿದ್ದೀರಿ. ಇದು ಆರೋಗ್ಯ ದೃಷ್ಟಿಯಿಂದ ಹಿತಕರವಲ್ಲವೆಂದು ಹೇಳುತ್ತೇನೆ. ಇನ್ನು ಕೆರೆಗಳ ವಿಚಾರ ತೆಗೆದುಕೊಂಡರೆ ಬತ್ತಿ ಹೋಗಿರತಕ್ಕ ಕೆರೆಗಳಲ್ಲಿ ನೀರನ್ನು ಉಪಯೋಗಿಸುತ್ತಿರುವುದನ್ನು ನೋಡಬಹುದು. ಅಂಥ ನೀರನ್ನು ಉಪಯೋಗಿಸುವುದರಿಂದ ಅನೇಕ ಕಾಯಿಲೆಗೆ ಒಳಗಾಗಿರುವುದನ್ನು ನೋಡುತ್ತೇವೆ. ಇದು ಸಂಕಟ ಬರತಕ್ಕ ವಿಚಾರವಾಗಿದೆ. ಮಂತ್ರಿಗಳು ಇರತಕ್ಕ ಜಾಗದಲ್ಲಿ ಲಕ್ಷಾಂತರ ರೂಪಾಯಿಗಳನ್ನು

ಖರ್ಚುಮಾಡಿ ಕಾವೇರಿ ನೀರನ್ನು ತರಿಸಿರುತ್ತೀರಿ. ಪಟ್ಟಣಗಳಿಗೆ ಯಾವರೀತಿ ಗಮನ ಕೊಡುತ್ತೀರಿ ಆ ದೃಷ್ಟಿಯಲ್ಲಿಯೇ ಮೂರನೆ ಒಂದು ಭಾಗದಷ್ಟಾದರೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ನಿಜವಾಗಿಯೂ ನಿಮಗೆ ಸಹಾನುಭೂತಿ, ಶ್ರದ್ಧೆ ಇದ್ದರೆ 18, 20 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬೋರ್ ಹಾಕಿಸಿ ಎರಡು ಎರಡೂವರೆ ಸಾವಿರ ರೂಪಾಯಿ ಖರ್ಚುಮಾಡಿ ಹ್ಯಾಂಡ್ ಪಂಪುಗಳನ್ನು ಪಂಜಾಬಿನಲ್ಲಿ ಯಾವರೀತಿ ಮಾಡಿರುತ್ತಾರೆ, ನಾಲ್ಕು ವರ್ಷವಾದರೂ, 10 ವರ್ಷವಾದರೂ ಈ ಹ್ಯಾಂಡ್ ಪಂಪುಗಳು ಕೆಟ್ಟಿಲ್ಲವೆಂದು ಹೇಳುತ್ತಾರೆ, ಆರೀತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ತಾಲೂಕು ಬೋರ್ಡ್ ವತಿಯಿಂದ ಒಂದೊಂದು ತಾಲೂಕಿನಲ್ಲೂ ನೀರಾವರಿ ಕೆರೆಗಳು ಏನು ಇರುತ್ತವೆ ಅವು ಸುಮಾರು ಹತ್ತು ಎಕರೆ ಒಳಪಟ್ಟು ವಿಸ್ತೀರ್ಣ ಉಳ್ಳದ್ದಾಗಿರುತ್ತವೆ. ಕೆರೆಗಳ ರಿಪೇರಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಳಬೇಕಾಗಿದೆ. ನೀವು ಕೊಡತಕ್ಕ 2 ಲಕ್ಷ ರೂಪಾಯಿಗಳಲ್ಲಿ ಸಾಮಾನ್ಯವಾಗಿ 50 ಸಾವಿರ ರೂಪಾಯಿಗಳ ಎಸ್ಟಾಬ್ಲಿಷ್ ಖರ್ಚಿಗೆ ಹೋಗುತ್ತದೆ. ಉಳಿದಿರತಕ್ಕ ಒಂದೂವರೆ ಲಕ್ಷದಲ್ಲಿ ಕೆರೆ ರಿಪೇರಿ ಮಾಡಬೇಕು ಬಾವಿಗಳನ್ನು ತೆಗೆಯಬೇಕಾದರೆ, ಇದು ಏತಕ್ಕೂ ಸಾಲುವುದಿಲ್ಲ. ಹರಿಜನರಿಗೆ ಪ್ರತ್ಯೇಕವಾಗಿ ಬಾವಿಗಳನ್ನು ತೆಗೆಯಲು ಕೊಡಬೇಕಾದುದಿಲ್ಲ. ಜನರಲ್ ಆಗಿ ಬಾವಿಗಳನ್ನು ತೆಗೆಯುವುದಕ್ಕೆ ಹಣವನ್ನು ಕೊಡಬೇಕು ಯಾವ ಬಾವಿಗೂ ಕೂಡ 10 ಸಾವಿರ ರೂಪಾಯಿಗಿಂತ ಕಡಿಮೆಯಾಗುವುದಿಲ್ಲ. 5 ಪರ್ಸೆಂಟ್ ಅಂದರೆ 500 ರೂಪಾಯಿ ಆಗುತ ದೆ 10 ಪರ್ಸೆಂಟ್ ಅಂದರೆ 1000 ರೂಪಾಯಿ ಆಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪಾಠಶಾಲೆಗಳನ್ನು ಕೊಡುವಾಗ ಸರ್ಕಾರದವರು ಪೂರ್ತಿಯಾಗಿ ಕೊಡುತ್ತಾರೆ. ಹಿಂದೆ ತಾಲ್ಲೂಕು ಬೋರ್ಡ್‌ನವರು ಕೊಡಬೇಕಾಗಿ ಬರುತ್ತಿತ್ತು. ಎಲ್ಲ ಭಾಗಕ್ಕೂ ಅಲ್ಪಸ್ವಲ್ಪ ದುಡ್ಡು ಕೊಟ್ಟು ಪೂರ್ತಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ಹೇಳಿದರೆ ಅದು ಸಾಧ್ಯವಾದ ಮಾತೇ ? ಕೆರೆಗಳ ರಿಪೇರಿಗಳನ್ನು ಕೊನೇ ಪಕ್ಷ ತಾಲ್ಲೂಕು ಬೋರ್ಡ್‌ವತಿಯಿಂದ ತೆಗೆಯಿರಿ ಅಂದರೆ ಎಸ್ಟಿಮೇಟ್ ಮಾಡುತ್ತಾರೆ, ಎಕ್ಸಿಕ್ಯುಟಿವ್ ಇಂಜಿನಿಯರ್ ಅವರ ಆಫೀಸಿಗೆ ಕಳುಹಿಸುತ್ತಾರೆ, ಪ್ರತಿ ಎಸ್ಟಿಮೇಟ್‌ಗೂ ಕೂಡ 50 ರೂಪಾಯಿ ಇಲ್ಲ 100 ರೂಪಾಯಿಗಳನ್ನು ಕಂಟ್ರಾಕ್ಟರ್ ಕೊಟ್ಟ ಮೇಲೆ, ಅದು ಏನು ಎಂಬುದನ್ನೂ ಕೂಡ ಸರಿಯಾಗಿ ನೋಡದೆ ಅದಕ್ಕೆ ಸೀಲ್ ಒತ್ತಿ ಕಳುಹಿಸುತ್ತಾರೆ. ಏನೆಂದರೆ ನಾನು ಇದನ್ನು ತಾಲ್ಲೂಕುಬೋರ್ಡ್ ಅಧ್ಯಕ್ಷನಾಗಿ ನೋಡಿದ್ದೇನೆ. ಹತ್ತಾರು ಸಲ ಫೋನ್ ಮಾಡಿದ ಮೇಲೆ, ಯಾರೇ ಫೋನ್ ಮಾಡಿದರೂ ಕೂಡ ನಮಗೆ ಕೊಡುವುದನ್ನು ಕೊಡಿ ಎಂದು ಕೇಳುತ್ತಾರೆ.

(ಶ್ರೀ ಕೆ. ಹೆಚ್. ಹನುಮೇಗೌಡ)

ಇದು ಅಲ್ಲಿಂದ ಪಿ. ಡಬ್ಲ್ಯೂ. ಡಿ. ಆಫೀಸ್‌ಗೆ ಬಂದಮೇಲೆ ಅವರಿಗೆ ದುಡ್ಡು ಕೊಡಬೇಕು. ಇಲ್ಲದೇ ಹೋದರೆ ಎಷ್ಟೋಸಾರಿ ಎಸ್ಟಿಮೇಟ್‌ಗಳೇ ಸ್ಯಾಂಕ್ಷನ್ ಆಗಿ ಬರುವುದಿಲ್ಲ. ಏನೆಂದರೆ ನನಗೆ ಇದು ಸಾಕಷ್ಟು ಅನುಭವ ಆಗಿದೆ. ತಾಲ್ಲೂಕ್ ಬೋರ್ಡ್‌ನಲ್ಲಿ ಸಬ್ ಓವರ್ಸಿಯರ್ ಎಂದು ಇರುತ್ತಾರೆ. ಅಲ್ಲಿ ಮೈನರ್ ಟ್ಯಾಂಕ್ಸ್ ಎಸ್ಟಿಮೇಟ್‌ಗಳು ಆದಷ್ಟು ಜಾಗ್ರತೆ ಸ್ಯಾಂಕ್ಷನ್ ಆಗುವಂತೆ ಮಾಡಿ ಇಲ್ಲದೇ ಹೋದರೆ ತಾಲ್ಲೂಕು ಬೋರ್ಡನ್ನು ತಲುಪಿದ 8- 0 ದಿವಸದಲ್ಲಿ ರಿಪ್ಲೈ ಬರುವಂತೆ ಮಾಡಿ. ಯಾವ ತಾಲ್ಲೂಕು ಬೋರ್ಡ್‌ಗಳು ವೀಕ್ ಆಗಿರುತ್ತವೆ ಅವುಗಳಿಗೆ ಅವಶ್ಯಕವಾಗಿ ಬೇಕಾದ ಡೆವಲಪ್‌ಮೆಂಟ್ ವರ್ಕ್‌ಗಳಿಗೆ ಹಣವನ್ನು ಬೇಗ ಕೊಡುವಂತೆ ಮಾಡಿ. ಮಾನ್ಯ ರಾಚಯ್ಯನವರು ಈ ಖಾತೆಯನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ತಾಲ್ಲೂಕು ಬೋರ್ಡ್ ರೆಸಲ್ಯೂಷನ್ ಮಾಡಿ ಡೆಪ್ಯುಟಿ ಕಮಿಷನರ್‌ರವರಿಗೆ ಕಳುಹಿಸುತ್ತಿದ್ದರು ಅವರು ಡಿವಿಜನಲ್ ಕಮಿಷನರ್‌ರವರಿಗೆ ಕಳುಹಿಸುತ್ತಿದ್ದರು. ಅವರು ಅಂಥ ವರ್ಕ್‌ಗಳಿಗೆ ಹಣವನ್ನು ಮಂಜೂರು ಮಾಡುತ್ತಿದ್ದರು. ಈಗ ಡಿವಿಜನಲ್ ಕಮಿಷನರ್‌ರವರು ಹಣವನ್ನು ಮಂಜೂರು ಮಾಡುವುದಕ್ಕೆ ಅಧಿಕಾರ ಇಲ್ಲ. ಇಡೀ ರಾಜ್ಯದಲ್ಲಿನ ಎಲ್ಲ ಕೆಲಸ ಕಾರ್ಯಗಳನ್ನೂ ಕೂಡ ನಾವೇ ನೋಡುತ್ತೇವೆ ಎಂದು ಹೇಳಿದಿರಿ. ನೀವು ಯಾವ ಆಧಾರದ ಮೇಲೆ ನೋಡುತ್ತೀರಿ.?

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅಧಿಕಾರಿಗಳು ಕ್ರಮವರಿತು ಹಂಚುವುದಿಲ್ಲ. ಆದ್ದರಿಂದ ಅಧಿಕಾರಿಗಳ ಜೊತೆಯಲ್ಲಿ ನೇರವಾಗಿ ನಾವೇ ಸಂಬಂಧ ಇಟ್ಟುಕೊಂಡು ಈ ಕೆಲಸವನ್ನು ಮಾಡಬೇಕೆಂದು ಮಾಡಿರತಕ್ಕ ವ್ಯಾಪಾರ, ಅಲ್ಲ ವ್ಯವಹಾರ.

ಶ್ರೀ ಕೆ. ಹೆಚ್. ಹನುಮೇಗೌಡ :—ಅದು ಅಲ್ಲವೆಂದು ಹೇಳುತ್ತೀರಿ. ಅದು ಅಲ್ಲದಿದ್ದರೆ ಬಹಳ ಸಂತೋಷ. ನಿಮ್ಮ ಅಧಿಕಾರಿಗಳನ್ನು ನಂಬಿ ಅವರಿಗೆ ಜವಾಬ್ದಾರಿ ಕೊಡಿ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಂಜೂರು ಮಾಡುತ್ತಾರೆ. ಈಗ ತಾಲ್ಲೂಕ್ ಬೋರ್ಡ್‌ನಲ್ಲಿರತಕ್ಕ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಧಿಕಾರಿಗಳು, ಬಿ. ಡಿ ಒ ಗಳು, ಗ್ರಾಮ ಸೇವಕರು, ಅವರ ವಿಭಾಗಗಳನ್ನು ಇನ್ಸ್‌ಪೆಕ್ಟ್ ಮಾಡುವುದು, ಅವರ ಟಿ ಎ, ಡಿ ಎ., ಮಾಡುವುದು ಅವರದ್ದೇ ಆಗುತ್ತಿದೆ. ಇದುವರೆಗೂ ಈ ಅಧಿಕಾರ ಅಸಿಸ್ಟೆಂಟ್ ಕಮಿಷನ್‌ರವರಿಗೆ ಇತ್ತು. ಆದರೆ ಈಗ ಅದನ್ನು ನಮ್ಮ ಮಾನ್ಯ ರಾಚಯ್ಯನವರು ತಪ್ಪಿಸಿಬಿಟ್ಟು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್‌ಗೆ ಕೊಟ್ಟಿದ್ದಾರೆ. ಜನರು ಇದರ ಬಗ್ಗೆ ಏನೇನೋ ಕಥೆಗಳನ್ನು ಹೇಳುತ್ತಿದ್ದಾರೆ. ಆದರೆ ಇದರ ಬಗ್ಗೆ ಸರಿಯಾದ ಆಧಾರವಿಲ್ಲದೆ

ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ, ತಮಗೆ ಗೊತ್ತಿದ್ದರೆ ಯಾವ ರೀತಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ ಎಂಬುದನ್ನು ಹೇಳಿ? ತಾವು ಇದನ್ನು ತಪ್ಪಿಸಿಬಿಟ್ಟು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್‌ಗೆ ಏತಕ್ಕೆ ಕೊಟ್ಟಿದ್ದೀರಿ? ಇದರಿಂದ ಏನಾಗಿದೆ ಎಂದರೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್‌ರವರು ಟೂರ್ ಮಾಡುವ ಹಾಗಿಲ್ಲ. ಅವರು ಒಂದು ಕಡೆ ಕೂತುಕೊಂಡು ಏನೇನು ಕೆಲಸಕಾರ್ಯಗಳು ಆಗಿವೆ ಎಂಬುದನ್ನು ನೋಡಿಕೊಳ್ಳಬೇಕು. ತಾಲ್ಲೂಕು ಬೋರ್ಡ್‌ನಲ್ಲಿ ಮಾಹಿತಿ ಇರುವುದಿಲ್ಲ. ಹೀಗಾದರೆ ಅವರು ಯಾವ ರೀತಿ ಅಥವಾ ಯಾವ ಆಧಾರದ ಮೇಲೆ ಮಾಡಬೇಕೋ ತಾವೇ ತಿಳಿಸಿ. ಅಸಿಸ್ಟೆಂಟ್ ಕಮಿಷನ್‌ರವರು ಮಾಡುವ ಕೆಲಸವನ್ನು ತೆಗೆದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್‌ಗೆ ಏತಕ್ಕೆ ಕೊಟ್ಟಿರಿ? ಇದರಿಂದ ಏನಾಗಿದೆ ಎಂದರೆ ಆಗತಕ್ಕ ಕೆಲಸ ಬಹಳವಾಗಿ ನಿಂತು ಹೋಗಿದೆ. ಇನ್ನು ಯಾವುದೋ ಬೇರೆ ಕೆಲಸಕ್ಕೆ ಅನುಕೂಲ ಮಾಡಿ ಕೊಟ್ಟಿರಿ ಅಷ್ಟೆ. ಪ್ರತಿಯೊಂದು ತಾಲ್ಲೂಕಿಗೆ ಇಷ್ಟೇ ಟಿ.ಎ. ದುಡ್ಡು ಕೊಡಬೇಕು ಎಂದು ಒಂದು ಪ್ರತಿಬಂಧಕ ಹಾಕಿ. ಈ ಬಗ್ಗೆ ಅನ್ಯಥಾ ಭಾವಿಸಬೇಡಿ. ಕೆಲವರು ಯೋಗ್ಯರೂ ಇರಬಹುದು. ಅವರ ಬಗ್ಗೆ ಕ್ಷಮಾಪಣೆ ಕೇಳುತ್ತೇನೆ. ಇಲ್ಲಿ ಇನ್ನೊಂದು ಹೇಳಬೇಕಾದರೆ ಅನೀತಿ, ಅವ್ಯವಹಾರಗಳಿಗೆ ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ. ದಯಮಾಡಿ ಇಂಥಾದ್ದಕ್ಕೆ ಅವಕಾಶಗಳನ್ನು ಮಾಡಿಕೊಡಬಾರ ದೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ರೈತರ ಬಗ್ಗೆ ಹೇಳುವು ದಾದರೆ ಹಳ್ಳಿಯಲ್ಲಿರತಕ್ಕ ಎಲ್ಲ ವ್ಯವಸಾಯಗಾರರೂ ಕೂಡ ಬೆಳಿಗ್ಗೆ 6-7 ಗಂಟೆಗೆ ಹೊರಗಡೆ ಹೋಗಬೇಕಾದರೆ ತಮ್ಮ ಚಿಕ್ಕ ಮಕ್ಕಳನ್ನು ಅವರ ದೊಡ್ಡ ಮಕ್ಕಳ, ಅಂದರೆ ಅಕ್ಕನೋ ತಂಗಿಯೋ ಇದ್ದರೆ ಅವರ ಜೊತೆಯಲ್ಲಿ ಬಿಟ್ಟು ಹೊರಟು ಹೋದರು ಎಂದರೆ ಪುನಃ ಅವರು ಬರುವುದು ಸಂಜೆ 6-7 ಗಂಟೆಗೆ. ಈ ಮಧ್ಯ ದಲ್ಲಿ ಆ ಮಕ್ಕಳು ಕೈಗೆ ಸಿಕ್ಕಿದ್ದನ್ನು ತಿಂದುಕೊಂಡು ಬೀದಿಯಲ್ಲಿ ಸುತ್ತಿಕೊಂಡಿರು ತ್ತವೆ ಇದನ್ನು ಕಣ್ಣಿನಿಂದ ನೋಡುವುದಕ್ಕಾಗುವುದಿಲ್ಲ. ಬಾಯಿಂದ ಹೇಳುವುದಕ್ಕಾಗುವುದಿಲ್ಲ. ಇದನ್ನು ಏತಕ್ಕೆ ಹೇಳುತ್ತೇನೆ ಅಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ 20-30 ಶಿಶುವಿಹಾರಗಳು ಇರುತ್ತವೆ. ಒಂದು ಶಿಶುವಿಹಾರ ಎಂದರೆ ಅದಕ್ಕೆ ತಾಲ್ಲೂಕು ಬೋರ್ಡ್ ನವರು 25 ರೂಪಾಯಿ ಕೊಡುತ್ತಾರೆ, ಊರಿನವರು ಬಹುಶಃ 25 ರೂಪಾಯಿ ಕೊಡುತ್ತಾರೆಂದು ಕಾಣುತ್ತದೆ. ಈ 50 ರೂಪಾಯಿಯಲ್ಲಿ ಅವರು ಶಿಶುವಿಹಾರಗಳನ್ನು ಯಾವ ರೀತಿಯಲ್ಲಿ ನಡೆಸಬೇಕು? ಯಾವ ಮೇಡಂ ಬಂದು ಅಲ್ಲಿ ಪಾಠ ಹೇಳಿ ಕೊಡುತ್ತಾರೆ? ಆದುದರಿಂದ ನಾನು ಹೇಳುವುದೇನೆಂದರೆ. ತಾವು ಯಾವುದಕ್ಕೆ ದುಡ್ಡನ್ನು ಕೊಡದಿದ್ದರೂ ಚಿಂತೆ ಇಲ್ಲ. ಎಲ್ಲಿ ಬಡವರ ಸಂಖ್ಯೆ ಜಾಸ್ತಿ ಇರುತ್ತದೆ ಅಂಥ ಕಡೆ ಶಿಶುವಿಹಾರಗಳನ್ನು ಪ್ರಾರಂಭ

(ಶ್ರೀ ಕೆ. ಹೆಚ್. ಹನುಮೇಗೌಡ)

ಮಾಡಿ ಅದಕ್ಕೆ 100 ರೂಪಾಯಿಗಳನ್ನು ಕೊಡಿ. ಇನ್ನೂ ಏನಾದರೂ ಹೆಚ್ಚು ಕೊಡುವುದಿದ್ದರೆ ಕೊಡಿ; ಅದರಿಂದ ತಮಗೆ ಹೆಚ್ಚು ಪುಣ್ಯ ಬರುತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಎಲ್ಲಾ ಹಳ್ಳಿಗಳಲ್ಲೂ ಕೂಡ ಕೊನೇ ಪಕ್ಷ ಒಂದೊಂದು ಶಿಶುವಿಹಾರವನ್ನು ತೆರೆಯುವುದಕ್ಕೆ ಪ್ರಯತ್ನ ಮಾಡಿ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತು ಹೇಳಬೇಕಾದರೆ, ಈಗ ತಾಲ್ಲೂಕ್ ಬೋರ್ಡ್ ಪತಿಯಿಂದ, ಪಂಚಾಯ್ತಿ ಪತಿಯಿಂದ ಹರಿಜನರ ಕಲ್ಯಾಣಕ್ಕಾಗಿ 18 ಪರ್ಸೆಂಟ್ ಹಣವನ್ನು ಖರ್ಚು ಮಾಡಬೇಕೆಂದು ಹೇಳುತ್ತಿದ್ದೀರಿ. ಇದು ಬಹಳ ಸಂತೋಷ. ಆದರೆ ಇದರಿಂದ ನನಗೆ ಏನು ಅನಿಸುತ್ತದೆ ಎಂದರೆ ಈ ಜನಗಳಿಗೆ ನಾವು ಒಳ್ಳೆಯ ದಾರಿಯಲ್ಲಿ ಹೋಗಬೇಕೆಂದು ವಿವೇಕ ಬರುವವರೆಗೂ ಕೂಡ ನೀವು ಲಕ್ಷ್ಯಾಲಕ್ಷ ರೂಪಾಯಿಯಲ್ಲ, ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಅದು ಸದ್ವಿನಿಯೋಗವಾಗುವುದಿಲ್ಲ. ಇವರು ಹಾಳಾಗುತ್ತಿರುವುದಕ್ಕೆ ಮುಖ್ಯ ಕಾರಣ ಎಂದರೆ, ಕುಡಿತ ಎಂದು ಹೇಳಿದರೆ ತಪ್ಪಾಗಲಾರದು. ಕಷ್ಟಪಟ್ಟು ದುಡಿದಂಥ ಹಣವನ್ನು ದಾರಿಯಲ್ಲಿ ಬರುವಾಗ ಕುಡಿದುಕೊಂಡು ಮನೆಗೆ ಬರುತ್ತಾರೆ. ಮನೆಯಲ್ಲಿ ಹೆಂಡತಿ ಮಕ್ಕಳು ಉಪವಾಸ ಇರುತ್ತಾರೆ. ಹಿಂದೆ ಗಾಂಧೀಜಿಯವರು ಒಂದು ಮಾತು ಹೇಳಿದ್ದನ್ನು ನಾನು ಎಲ್ಲೋ ಓದಿದ್ದು ಜ್ಞಾಪಕ ಇದೆ. ಏನೆಂದರೆ ಕಟುತದಿಂದ ಬಂದ ಹಣದಿಂದ ರಾಜ್ಯಭಾರ ಮಾಡುವುದಾದರೆ, ಬಡವರ ಕಣ್ಣೀರು ಸುರಿಸುವುದಾದರೆ ಅಂಥ ಹಣದಿಂದ ಸರ್ಕಾರವನ್ನು ನಡೆಸುವುದಾದರೆ ಅಂಥ ಸರ್ಕಾರವೂ ಬೇಡ, ಅಂಥ ಸ್ವರಾಜ್ಯವೂ ಬೇಡ ಎಂದು ಹೇಳಿರುವುದನ್ನು ನಾನು ಒಂದು ಕಡೆ ಓದಿರುವುದು ಜ್ಞಾಪಕ ಇದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಇಂಥಾ ಮಾತನ್ನು ಹೇಳಿದರೂ ಕೂಡ ಅವರ ಶಿಷ್ಯರು ಎಂದು ಹೇಳಿಕೊಂಡು ಬಂದವರು ಪುನಃ ಈ ಕುಡಿತವನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಇದರಿಂದ ಬಹಳ ಅನರ್ಥವಾಗುತ್ತಿದೆ. ಗ್ರಾಮಾಂತರ ತಿಳುವಳಿಕೆ ಇಲ್ಲದ ಜನ ಅನೇಕ ಜನರಿದ್ದಾರೆ. ಅಂಥ ಕಡೆ ಹೋಗಿ ಅವರು ಕುಡಿಯುವುದನ್ನು ಬಿಟ್ಟು ಇತರರಂತೆ ಬದುಕಿ ಬಾಳಬೇಕೆಂದು ಬುದ್ಧಿ ಹೇಳಿ. ಅವರ ಮಕ್ಕಳಿಗೆ ಪುಸ್ತಕಗಳನ್ನು ತಂದು ಕೊಡಿ. ಒಂದು ಕಡೆ ಮಾನ್ಯ ರಾಚಯ್ಯನವರು ಭಾಷಣ ಮಾಡುವಾಗ ಬೀರು ಕುಡಿಯಿರಿ ಎಂದು ಹೇಳಿದರಂತೆ ಅವರಿಗೆ ಏನು ಬೇಕೋ ಅದನ್ನು ಕುಡಿಯುತ್ತಾರೆ. ಆದರೆ ಅವರು ಹೆಂಡ ಕುಡಿಯಿರಿ ಎಂದು ಹೇಳಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ, ಈ ಕುಡಿಯುವುದು ಏನಿದೆ ಅದನ್ನು ತಪ್ಪಿಸಬೇಕು. ಅದನ್ನು ಮಾಡದೇ ಹೋದರೆ ತಾವು ಏನು ಮಾಡಿದರೂ ಕೂಡ ಯಾವುದೂ ಫಲಕಾರಿಯಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ ಮಾನ್ಯ ರಾಚಯ್ಯನವರು, ಜಯಪ್ರಕಾಶ್ ನಾರಾಯಣ್‌ರವರು, ಮಾನ್ಯ ಬಸವಲಿಂಗಪ್ಪನವರು ಯಾವಾಗಲೂ ಹರಿಜನರ ಬಗ್ಗೆ ಪ್ರಚಾರ ಮಾಡುತ್ತಲೇ ಇರುತ್ತಾರೆ. ಅವರು ಇಲ್ಲಿ ಇದ್ದಿದ್ದರೆ ನಾನು ಹೇಳುತ್ತಿದ್ದೆ. ಈ ಹರಿಜನರ ಬಗ್ಗೆ ಮಾತನಾಡುವಂತಹ ಸುಮಾರು 10-20 ಜನ ಯಾರು ಮಿನಿಸ್ಟರುಗಳು, ಎಂ. ಎಲ್. ಎ ಗಳು, ಎಂ. ಪಿ. ಗಳು ಇದ್ದಾರೆ ಅವರ ಮಕ್ಕಳಿಗೇ ಎಲ್ಲಿ ಹೋದರೂ ಅಪಾಯಿಂಟ್‌ಮೆಂಟ್, ಟೆಕ್ನಿಕಲ್ ಕಾಲೇಜುಗಳಲ್ಲಿ ಸೀಟುಗಳು ಸಿಕ್ಕುತ್ತವೆಯೇ ಹೊರತು ಉಳಿದವರ ಮಕ್ಕಳಿಗೆ ಏನೂ ಸಿಕ್ಕುವುದಿಲ್ಲ. ಇನ್ನು ಜನತಾ ಹೌಸಿಂಗ್ ಸ್ಕೀಂ ಎಂದು ಏನು ಇದೆ ಅದರಲ್ಲೂ ಕೂಡ ಅವರಿಗೇ ಕೊಡುತ್ತಾರೆ. ನೀವು ಬುದ್ಧಿವಂತರು, ನಿಮ್ಮ ಮಕ್ಕಳನ್ನು ಕಾನ್‌ವೆಂಟ್‌ನಲ್ಲಿ ಓದಿಸುತ್ತೀರಿ. ನಿಮ್ಮ ಜನ ಓದುತ್ತಾರೆ ಬಿಡಿ. ದೇವರ ಸೃಷ್ಟಿಯಲ್ಲಿ ಇವರು ತೀರ ಬುದ್ಧಿವಂತ, ಅವನು ತೀರ ದಡ್ಡ ಎಂದು ಇರಲಾರದು. 12 ಪರ್ಸೆಂಟ್ ಎಲ್ಲಾ ಕಮ್ಯುನಿಟಿಯಲ್ಲೂ ಇರಬೇಕು. ಸರಿಯಾದ ಅನುಕೂಲ ಸಿಕ್ಕಿದರೆ ಎಲ್ಲರೂ ಓದುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಒಂದು 10 ಪೋಸ್ಟ್ ಕಾಲ್‌ಫಾರ್ ಮಾಡಿದರೆ, ಇಂಜಿನಿಯರಿಂಗ್ ಕಾಲೇಜು, ಎಂ. ಬಿ. ಬಿ. ಎಸ್. ಮೆಡಿಕಲ್ ಕಾಲೇಜಿನಲ್ಲಿ ಸೀಟುಗಳು ಎಲ್ಲಾ ಇವರ ಮಕ್ಕಳಿಗೇ. ನಾನು ಒಂದು ಸಲಹೆ ಮಾಡುತ್ತೇನೆ. ಅಭೂತಪೂರ್ವವಾಗಿ ಹಳ್ಳಿಗಳಲ್ಲಿ ಇರತಕ್ಕ ಹರಿಜನ-ಗಿರಿಜನರಿಗೆ ಪ್ರಯೋಜನ ಸಿಕ್ಕಬೇಕಾದರೆ ಇಂತಹವರ ಮಕ್ಕಳಿಗೆ ಕೊಡುವ ಅನುಕೂಲವನ್ನು ನಿಲ್ಲಿಸಬೇಕು. ಅಪಾಯಿಂಟ್, ಪ್ರಮೋಷನ್ಸ್ ಸೆಲೆಕ್ಷನ್ ಕೊಡುವಾಗ 1000-2000 ಇನ್‌ಕಂ ಇಡಿ. ಪರ್ಸೆಂಟೇಜ್ ಲೆಕ್ಕ ಹಾಕಿ, ಶ್ರೀಮಂತರ ಮಕ್ಕಳಿಗೆ ಮಟ್ಟ ಹಾಕಿ 2 ಪರ್ಸೆಂಟ್, 3 ಪರ್ಸೆಂಟ್, 0.5 ಪರ್ಸೆಂಟ್ ಅವರ ಮಕ್ಕಳಿಗೆ ಕೊಟ್ಟು ಉಳಿದಿದ್ದನ್ನು ಬಡವರ ಮಕ್ಕಳಿಗೆ ಕೊಡಿ. ಇದರ ಬಗ್ಗೆ ಶ್ರೀಮಾನ್ ರಾಚಯ್ಯನವರು ಗಮನಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪಂಚಾಯಿತಿಗಳ ಬಗ್ಗೆ ಹೇಳುವುದಾದರೆ, ಒಂದೊಂದು ಪಂಚಾಯಿತಿಗೆ 4-5-8 ಹಳ್ಳಿಗಳು ಇರುತ್ತವೆ, ಜನಸಂಖ್ಯೆ 1000-2000 ಇರುತ್ತದೆ. ಮನೆ ಕಂದಾಯ 2 ರೂಪಾಯಿ, 3 ರೂಪಾಯಿ, 4 ರೂಪಾಯಿ, ಎಂಟು ಆಣೆ ಹಾಕಿರುತ್ತಾರೆ. ಕಲೆಕ್ಷನ್ ವಾಲೆಂಟರಿಯಾಗಿ ಕೊಟ್ಟರೂ ಕೂಡ 2000 ರೂಪಾಯಿಗೆ ಮೇಲೆ ಉತ್ಪತ್ತಿ ಬರುವುದಿಲ್ಲ. ಛೇರ್ಮನ್, ಮೆಂಬರ್ಸ್ ಟೌನ್‌ಗೆ ಹೋಗುವಾಗ ಟಿ. ಎ. ತೆಗೆದುಕೊಳ್ಳುತ್ತಾರೆ. ಸಣ್ಣ ಕೆಲಸಗಳಿಗೆ ಪೀವನ್ ಇರುತ್ತಾನೆ, ಅವನಿಗೆ 500 ಆಗುತ್ತದೆ. ಇದಕ್ಕೆ 700-800 ರೂಪಾಯಿ ಹೋಗುತ್ತದೆ. ಇನ್ನು 700-800 ರೂಪಾಯಿ ಕೂಡ ಉಳಿಯುವುದಿಲ್ಲ. ಬಾವಿ ತೆಗೆಸಬೇಕಾದರೆ, 5 ಪರ್ಸೆಂಟ್ ಕೊಡಬೇಕು. ಅವರು ಸಣ್ಣಪುಟ್ಟ ಮೋರಿ ಕೆಲಸಗಳನ್ನು ಮಾಡಿಸಬೇಕಾಗುತ್ತವೆ.

(ಶ್ರೀ ಕೆ. ಹೆಚ್. ಹನುಮೇಗೌಡ)

ಶಿಶುವಿಹಾರ ನಡೆಸಬೇಕಾಗುತ್ತದೆ, ಶಿಶುವಿಹಾರದ ಮೇಡಂಗೆ 25-30 ಸಂಬಳ ಕೊಡಬೇಕಾಗ ತ್ತದೆ. ಇಷ್ಟೆಲ್ಲಾ ಜವಾಬ್ದಾರಿ ಅವರಿಗೆ ವಹಿಸಬೇಕಾದರೆ ಅವರಿಗೆ ಕೊಟ್ಟಿರತಕ್ಕ ಹಣ ಅತ್ಯಲ್ಪ. ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡ ಬೇಕಾದರೆ, ಬೇರೆ ಯಾವುದಾದರೂ ಬಾಬಿನಿಂದ ದುಡ್ಡು ಕೊಡಿ ಎಕ್ಸೈಜ್‌ನಿಂದ ಬರತಕ್ಕ ಹಣವೋ, ಫಾರೆಸ್ಟ್‌ನಿಂದ ಬರತಕ್ಕ ಹಣವನ್ನೋ ಕೊಟ್ಟು ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಹೇಳುತ್ತೇನೆ ಕೆಲವು ಪಂಚಾಯಿತಿಗಳಲ್ಲಿ ಒಂದೆರಡು ವರ್ಷವಾದರೂ ಮೀಟಿಂಗ್ ನಡೆಯುವುದಿಲ್ಲ. ರಾಜಕೀಯ ಭಿನ್ನಾಭಿಪ್ರಾಯ ಬಂದರೆ, ಮೈನರ್ ಇರುವುದು ಬಿಟ್ಟುಬಿಡಿ, 2-3 ಹಳ್ಳಿ ಮೆಜಾರಿಟಿ ಇರುವವರು 600-700 ರೂಪಾಯಿ ಖರ್ಚುಮಾಡಿಕೊಂಡು, ಕೆಲಸ ಮಾಡಿಕೊಂಡು ಹೋಗುತ್ತಾರೆ.

ಇನ್ನು ಊರಿಗೆ ಇಲೆಕ್ಟ್ರಿಸಿಟಿ ಕೊಟ್ಟಿರಿ. ಎಲೆಕ್ಟ್ರಿಸಿಟಿ ಬೋರ್ಡ್‌ನವರು ಸಾವಿರಾರು ರೂಪಾಯಿ ಖರ್ಚುಮಾಡಿ ಊರಿನಲ್ಲಿ ಲೈನನ್ನು ಎಳೆದಿರುತ್ತಾರೆ. ಅದೇನೋ ಭೂಕಂದಾಯದಿಂದ ಬರತಕ್ಕ ಚಾರ್ಜನಲ್ಲಿ ಡಿ. ಸಿ. ಯವರು ಡಿಡೆಕ್ಟ್ ಮಾಡ ತಕ್ಕ ವ್ಯವಸ್ಥೆ ಮಾಡಿದ್ದಾರೆ ಎಂದು ಕಾಣುತ್ತದೆ ಆ ರೀತಿ ಮಾಡಿದರೆ ಒಳ್ಳೆಯದು. ಮಾಡದೇ ಹೋದರೆ ಮಾಡಬೇಕು. ನ್ಯಾಷನಲ್ ರೂರಲ್ ವಾಟರ್ ಸಪ್ಲೈನವರು ಒಂದು, ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ನೀರನ್ನು ಸಪ್ಲೈ ಮಾಡುತ್ತಾರೆ, ಕರೆಂಟ್ ಚಾರ್ಜ್ ಕಟ್ಟದೇ ಹೋದರೆ ಕಿತ್ತುಕೊಂಡು ಹೋಗುತ್ತಾರೆ. ಇದನ್ನು ತಪ್ಪಿಸಬೇಕು. ಕರೆಂಟು ಮೋಟಾರು ಕೆಟ್ಟು ಹೋದರೆ ರಿಪೇರಿ ಆಗುವುದಿಲ್ಲ. ಸಾವಿರಾರು ರೂಪಾಯಿ ಖರ್ಚುಮಾಡಿ ಮೋಟಾರು ಹಾಕಿಸಿಕೊಂಡಿರುತ್ತಾರೆ ಈ ರೀತಿ ಆದರೆ ಬಹಳ ತೊಂದರೆಯಾಗುತ್ತದೆ. ಈ ಜವಾಬ್ದಾರಿಯನ್ನು ತಾಲ್ಲೂಕ್‌ಬೋರ್ಡ್‌ಗೆ ಕೊಟ್ಟು ತಾಲ್ಲೂಕ್ ಲೆವೆಲ್‌ನಲ್ಲಿ ಒಬ್ಬ ಮೆಕಾನಿಕ್‌ನ್ನು ಇಟ್ಟು, ಅವರು ಮೇಂಟೈನ್ ಮಾಡಿಕೊಂಡು ಹೋಗುವ ಹಾಗೆ ಮಾಡಬೇಕು. ಪವರ್ ಚಾರ್ಜ್ ಕೊಟ್ಟರೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 700—800 ರೂಪಾಯಿ ಉಳಿದಿರುತ್ತದೆ, ಮೋರಿ ಕಟ್ಟಬೇಕು ಎಂದು ರೆಸಲ್ಯೂಷನ್ ಮಾಡುತ್ತಾರೆ ತಾಲ್ಲೂಕ್‌ಬೋರ್ಡ್ ಸೂಪರ್‌ವೈಸರ್‌ಗೆ ಹೋಗಿ ಹೇಳಿದರೆ ಅವರು ಮಾಡುವುದಿಲ್ಲ. ಅವರು ಮಾಡಿರತಕ್ಕದ್ದು ಬಹಳ ಕಾಲ ಉಳಿಯುವುದಿಲ್ಲ ತಾಲ್ಲೂಕ್ ಬೋರ್ಡ್ ವತಿಯಿಂದ ಕಟ್ಟಿರತಕ್ಕ ಸಣ್ಣಸಣ್ಣ ಮೋರಿ 6 ತಿಂಗಳ ಮೇಲೆ ನೂರಕ್ಕೆ 90 ಭಾಗ ಉಳಿಯುವುದಿಲ್ಲ. ಇದಕ್ಕೆ ಕಾರಣ ಏನೆಂದರೆ ಪ್ರಾಪರ್ ಸೂಪರ್‌ವಿಷನ್ ಇರುವುದಿಲ್ಲ ಆದಕ್ಕೆ ಚೇರ್ಮನ್ನೇ ಕಂಟ್ರಾಕ್ಟ್ ತೆಗೆದುಕೊಂಡಿರುತ್ತಾರೆ, ಇಲ್ಲದೇ

ಹೋದರೆ ಅವರ ಕಡೆಯವರೇ ಕಂಟ್ರಾಕ್ಟ್ ತೆಗೆದುಕೊಂಡಿರುತ್ತಾರೆ. ಸುಮ್ಮನೆ ದುಡ್ಡು ಅಪವ್ಯಯವಾಗುತ್ತಿದೆ. ಇದನ್ನು ಕಡ್ಡಾಯವಾಗಿ ತಾಲ್ಲೂಕ್‌ಬೋರ್ಡಿಗೆ ಕೊಡಿಸಿ, ಅವರ ಸೂಪರ್‌ವಿಷನ್‌ನಲ್ಲಿ ಕೆಲಸಕಾರ್ಯಗಳನ್ನು ಮಾಡಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ತಾಲ್ಲೂಕ್ ಬೋರ್ಡ್ ಆಶ್ರಯದಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನೆಗೆ ಸಂಬಂಧಪಟ್ಟ ಅನೇಕ ಜನ ಅಧಿಕಾರಿಗಳು ಇದ್ದಾರೆ. ಅವರಿಗೆ ಕೆಲಸ ಇಲ್ಲ, ದುಡ್ಡು ಇಲ್ಲ, ಕಾಸು ಇಲ್ಲ. ಸುಳ್ಳು ಟೂರ್ ಪ್ರೋಗ್ರಾಂ ಹಾಕಿ ಟಿ. ಎ. ಡ್ರಾ ಮಾಡಿಕೊಂಡು ಸುಮ್ಮನೆ ಕಾಲ ಕಳೆಯುತ್ತಿದ್ದಾರೆ. ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್ ಇದ್ದಾರೆ. ಅಲ್ಲಿ ಒಂದು ಕೈಗಾರಿಕೆ ಕೂಡ ಇಲ್ಲ. ಕೈಗಾರಿಕೆ ಮಾಡುವುದಕ್ಕೆ ವ್ಯವಸ್ಥೆ ಇಲ್ಲ; ಅಲ್ಲಿ ಹೇಳುವವರು ಕೇಳುವವರು ಇಲ್ಲ. ಅವರು ಯಾವತ್ತಾದರೂ ಬಂದು ಇಷ್ಟು ಇಂಡಸ್ಟ್ರೀಸ್ ಸೂಪರ್‌ವಿಷನ್ ಮಾಡಿದ್ದೇನೆ ಎಂದು ಬರೆಯುತ್ತಾರೆ. ಗ್ರಾಮಸೇವಕರು ಇರುತ್ತಾರೆ, ಅವರು ಊರಿಗೆ ಹೋಗುವುದಿಲ್ಲ. ಎಲ್ಲಿ ಹೋಗಿದ್ದಿರಿ ಎಂದು ಕೇಳಿದರೆ ಬಿ. ಡಿ. ಓ ಅಗ್ರಿಕಲ್‌ಚರಲ್ ಆಫೀಸರ್ ಜೊತೆಯಲ್ಲಿ ಹೋಗಿದ್ದೆ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಇವರ ಜೊತೆಯಲ್ಲಿ ಹೋಗಿದ್ದೆ ಎಂದು ಹೇಳುತ್ತಾರೆ, ಯಾರೂ ಹೋಗಿರುವುದಿಲ್ಲ, ಡ್ಯೂಯಲ್ ಕಂಟ್ರೋಲ್ ಆಗಿದೆ, ಕ್ಲಿಯರ್ ಕಟ್ಟಾಗಿ ಇರುವುದಿಲ್ಲ. ಆದುದರಿಂದ ಗ್ರಾಮಸೇವಕರ ಕಂಟ್ರೋಲನ್ನು ಬಿ. ಡಿ. ಓ. ಅವರಿಗೆ ಜವಾಬ್ದಾರಿ ಕೊಡಿ; ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಕೊಡಿ ಅವರ ಆಶ್ರಯದಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುವಹಾಗೆ ಮಾಡಿದರೆ, ಚೆನ್ನಾಗಿ ಕೆಲಸ ಆಗುತ್ತದೆ. ಈ ನಾಲ್ಕು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಈ ವಿಚಾರಗಳಬಗ್ಗೆ ಕನಿಕರ ಇಟ್ಟು ಅಭಿವೃದ್ಧಿ ಕೆಲಸಕಾರ್ಯಗಳು ಆಗಬೇಕು ಎಂದು ಹೇಳುವುದಾದರೆ, ಸಾಕಷ್ಟು ದುಡ್ಡು ಕೊಡಿ, ಕೆಲಸ ಆಯಿತೋ ಇಲ್ಲವೋ ಎಂದು ವೆರಿಫೈ ಮಾಡಿ. ದುಡ್ಡು ಕೊಡದೆ ಸ್ಟಾಫ್ ಕಳಿಸಿ, ಬರೀ ಪ್ರಚಾರ ಮಾಡಿಕೊಂಡು ತಿರುಗುವ ಹಾಗೆ ಆತ್ಮವಂಚನೆ ಮಾಡುವುದಕ್ಕೆ ಹೋಗಬೇಡಿ. ಇಷ್ಟು ತಿಳಿಸಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಇಷ್ಟು ಕಾಲವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ

4-00 P. M.

SMT. SUMATHI B. MADIMAN (Dharwar) :—Madam Speaker, I support the demand placed before the House by the Hon. Finance Minister On behalf o the women and children of Karnataka I thank the Hon. Chief

(Smt. Sumathi B. Madiman)

Minister for having set up a new Department of Welfare for women and children. This has very well coincided with the International women's year. Even after 25 years of independence the status of women in India has not come up to the level of women atleast in some parts of the world. But still in India women have been given greatest respect. We find most of the rivers are named after women the rivers are being called Ganga, Yamuna, Cauvery and there are Goddesses like Lakshmi, Saraswathy, Annapurna etc. giving them the status they have been placed on a shelf and have been forgotten. The women dont want the men to forget the rights and privileges of the women. The want their presence to be felt. The aim to declare 1975 as International Women year was to make the world to realise that everything depends upon the progress and prosperity of the women because half of the population of the world is women The women should be involved in the social and cultural devolopment of the world. They should participate especially in the world peace.

Quite a considerable amount is earmarked for the Social Welfare Department. I trust that the Women and Child welfare Department will be allocated quite a considerable amount out of it. The Social Welfare Department has take keen interest in promoting the welfare of Scheduled Caste and Scheduled Tribes. I would urge that more attention has got to be paid to the welfare schemes of the rural people in every nook and corner of our State and the country as a whole I would suggest that Women and Child Welfare Department should be made independent and a special Directorate should be set up because women and children are also part and parcel of the vulnerable section. I would like to offer a few suggestions as to how this Welfare Department could be set up. At State level a Lady I. A. S. Officer should be appointed as Director

and a Welfare Officer at the District level and Muknya-sevikas at the Taluka level. The District Officer should go round the rural areas and help the rural people. She should be in-charge of rural activities and the people could easily approach her and through her the State Authorities. At the same time we should take every care to see that Taluka Federation of Mahila Mandals are formed and the Chairman of these Mandals constitute District Federation and the Chairman of which be the member of the State Social Welfare Advisory Board of the State Council for Child Welfare and other Institutions. If we are really interested in planning to have the rural women participate in all the activities and involve herself in Government she should be brought to the State level or atleast to the District level. We find that there are some who do not know what is going on for the welfare of women and children. The Directorate should take up advertising and let them know that there are schemes for them. I would further suggest that this Directorate should be entrusted with the work of maintaining and running the State Home for women; Certified Schools; Remand Home; Homes for the blind; Deaf & Dumb; Mentally retarded; handicapped; Orphanages, Homes for Destitute women; Hostel for working women; Hostel for girls. The Social Welfare Board and the State Council for Child Welfare should be under this Directorate and maintain their own Status as these Boards encourage voluntary Organisations to come forward. The Voluntary Organisations which do some good work should be encouraged. I would suggest that Family Planning should also be part of this Directorate as it is easy for women to approach both for women in rural and urban areas. It is the women who has to bear the child and bring it up. The children should be brought up to be mentally and physically strong. We are having under-nourished children who go blind because of mal-nutrition and other deficiency. I think this is a great problem which we have to face and make adequate provisions for family planning. Every citizen

(Smt. Sumathi B. Madiman)

should realise his duty towards the Nation especially towards the family planning. I think we will be betraying our country, if we do not realise our duty and follow family planning. Thc population explosion is a retrograde step for progress of any Nation. It creates scarcity of all commodities. I would like to quote a few facts and figures which will be an eye opener for all those who have not realised that over population is a danger to development and progress of a country and causes scarcity of every commodity and unhealthy citizens. The population in India during 1971-72 was 54.7 crores. The total population according to the Planning Commission was 58 crores and in 2000 A. D the population would be 1097 million. The world population is 7 Billions. Therefore more attention should be paid. In the Fifth Five Year Plan for Family Planning in which 516 crores has been ear-marked and it will continue to receive the highest priority. This is a centrally sponsord Scheme and there will be no dearth for money. This money allocated should be channelised through this Directorate and Social Welfare Institutions. I would also suggest that a legal cell should be formed under this Directorate to help the women who are harassed and against whom atrocities are committed. I am sure everybody here is aware that when women want to get jobs in any field of life they are harassed and certain conditions are put which are unthinkable and unheard of. She has sometimes, to resort to even immoral ways. I don't think it is right in any society to treat a woman as she is trected to-day. She has no place to go where she can get some legal advice. She has no place to go where she knows she will be protected. So, I would suggest a legal cell in this Directorate is very essential. How many of us, even educated women, know the protective legislation enacted in respect of women and even if we would like to know, how many of us are in a position to avail them ? Therefore, I insist

that there should be a legal cell where any woman can go and get proper advice.

I would suggest that an Employment Exchange solely for women should also come under this Directorate, so that they need not go to the doors of the Employment Exchange where ultimately the dominant male is given first preference.

SRI M. S. KRISHNAN.--This is the International Women's Year. You dominate. It is the first step towards progress.

SMT. SUMATHI MADIMAN.—You are already dominating. The International Women's Year is meant to see that both men and women are equal. We have never said we want to dominate men. We want to go side by side with them. That is the policy of the women.

ಶ್ರೀ ಎಂ. ಎಸ್. ಕೃಷ್ಣನ್.- ಎತ್ತರಸ್ಥಾನ ಕೊಟ್ಟು ಷೆಲ್ಫ್‌ನಲ್ಲಿ ಹಾಕಿಬಿಟ್ಟಿದ್ದೀರಿ.

SMT. SUMATHI MADIMAN.—Spiritually we are much higher above you. Physically we have to be with you.

SRI M. S. KRISHNAN. -You are already above us. ಪ್ರಧಾನಮಂತ್ರಿಗಳು ಇದ್ದಾರೆ, ತಾವು ಇದ್ದೀರಿ, ಎಲ್ಲಾ ಆದ ಮೇಲೆ ಏನು ಬೇಕು, ನಮ್ಮನ್ನು ಕಂಟ್ರೋಲ್ ಮಾಡುವುದಕ್ಕೆ ತಾವು, ಮೇಲ್ಗಡೆ ಪ್ರಧಾನಿಯವರು ಇನ್ನು ಯಾರು ಬೇಕು ?

SMT. SUMATHI MADIMAN.-- Madam Speaker, I would like to say we would aspire to see that in every village a small edition of Mrs. Indira Gandhi comes forward and only then our country will really progress and go forward I am sure you will fully agree with me.

(Sri Sumathi B. Madiman)

Even under S. I. T Act, you fiind woman is punished and the man is left scot free. Is it right for man to make laws for woman which do not meet out full justice? I don't think they have any more right to make laws for women. We have enough women lawyers, we have got educated women, women who have got sound common sense, who can make legislation for womenfolk. If we go through the labour laws, we see that women's interests are not sufficiently protected. Whether it is in the field of agricultural labour or in the factory, the woman labourer is paid less. Is it because she does not work? I would say she works for more hours than men. I am sorry that I don't have the statistics. In one magazine it was said that every minute that man wastes, is a loss to the nation. Hundreds of times the man goes out to drink coffee and smoke cigarette and wastes his time. Please forgive me for saying this. With all that they say it is true a woman is weak physically. But biologically she has proved to be stronger than man. She can endure more suffering than man. The humans do not have sympathy for her; just because she has to be given maternity benefits, she is no more taken in the factories or in the fields. This is not justice and we will have to see that this discrimination is eradicated.

Even in the Life Insurance Corporation, you will find that the woman has to pay more premium. If you see the statistics, you will see that there are more widows than widowers. What sort of a policy is this? The woman does not get the accident and other facilities given to men. At the time when the Insurance scheme come into existence probably the mortality of women must have been higher but it is not so now. it has changed. Everywhere woman is pushed back and neglected and then they say: you are the people who rule us.

Regarding labour census, the percentage of women workers, has steadily declined from 27.95 per cent in 1961 to 13.18 per cent in 1971. It is thus clearly seen that there has been discrimination. Woman labour is the cheapest and the weakest, hence she has been exploited.

SRI M. S. KRISHNAN:—In some factories, women are permitted to take up jobs only if they give in writing that they don't get married. This is most atrocious

SMT. SUMATHI MADIMAN:—What about men? Men can do anything. Woman is not supposed to get married. I am glad the hon. Member told me about it because, everywhere you will find that girls are working even in the offices. Biologically, sometimes, a girl is not well and once in a month or so, if she is ill, she needs a little rest, is there any one to consider her condition why she is unable to work? Don't you think this is a great injustice, especially in a country like ours where mother is regarded as the soul and whole of the country. To help the socio-economis development of woman, emphasis should be laid on job oriented education for girls right from the village level more schools should be started in rural areas, to enable them to continue their studies, because a large percentage of girls in rural areas, after third or fourth standard discontinue their education, since they don't have a school nearby. Family life is disrupted in the rural areas as the woman has to go and establish a house in the nearby urban place where she lives with the children for the sake of education. I would suggest that these facilities should be taken down to villages instead of trying to bring them to urban areas.

But, if it is impossible, atleast, we could build some hostels and have special residential schools for girls.

(Smt, Sumathi Madiman)

At the same time, I would like to suggest that training should be given to girls who have passed out of their high school, or even lower than that but fortunately, now every person is aware of their respect and nobody would like to work as cook or as a maid-servant. When I was in Tamil Nadu, I have visited some Centres which were run by the Guilds of service They have been doing wonderful service. Girls from different States, about 40 in number are brought into Seva Samajam Homes and there, they are trained as House-wives and the syllabus includes teaching in child care, personal hygiene domestic science, cooking, house-keeping, laundry marketing and I am very happy to mention that these girls have been taken abroad by our embassies to work. Many are sent to Delhi and Bombay where there was a great need for such services and she is treated as one of the members of the family. There are conditions given as to how she should be treated, one day in a week she should be given a holiday, two sets of dresses should be given. They have printed forms of all the rules and contitions to be followed. It is really a wonderful scheme. I wish under this Directorate, we have to adopt such type of schemes which will result in eradicating unemployment amongst women.

Why people are exploiting women? I would like to say that because the socio-economic development has not taken place and she is illeterated there is nobody to help her. So, I suggest that this Department should take such schemes which are going to help the woman and children Recently, I read in some papers that in Maharashtra, t ey are going to form a Corporation to lo k after the needs of the woman-folk. I also come to know that it will be more on par with the Financial Corporarions but I would like to say, more than that, this Directorate could take care of all the aspects of a woman and all the activities pertaining to the woman

and child, which is very necessary than all other things.

I thank the Hon. Speaker for having given me this opportunity to talk to-day because for quite some time, I was eagerly waiting to say a few words on this subject. I would like to repeat once again that there is a great need for the woman to participate in all activities for the real progress of our country.

I once again thank the Hon. Speaker for having given me this opportunity and conclude.

‡ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು (ಶಾಂತಿನಗರ) :— ಸನ್ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ 1975ನೇ ಇಸವಿಯ ಅಪ್ರೋಪ್ರಿಯೇಷನ್ ನಂಬರ್ (2) ಮಸೂದೆಯನ್ನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟಿರತಕ್ಕ ಹಣ ಸಾಲದು ಎಂದು ನನಗೆ ಅನಿಸುತ್ತದೆ ಈ ಬಾಬಿಗೆ ಕೇವಲ 10 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದ ಬಡ್ಜೆಟ್ 300 ಕೋಟಿ ರೂಪಾಯಿಗಳ ಬಡ್ಜೆಟ್. ನಮ್ಮ ರಾಜ್ಯದಲ್ಲಿ 100ಕ್ಕೆ 60 ರಷ್ಟು ಜನ ಹಿಂದುಳಿದ ಜನಾಂಗದವರು ಇದ್ದಾರೆ. ಸುಮಾರು 30-40 ಲಕ್ಷ ಹರಿಜನಗಿರಿಜನರು ಇದ್ದಾರೆ. ಆದ್ದರಿಂದ ಈ ಇಲಾಖೆಗೆ 10 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಸಾಲುವುದಿಲ್ಲ. ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು ಇವರು ಶತಮಾನಗಳಿಂದ ಹಿಂದುಳಿದಿದ್ದಾರೆ. ಈ ಜನಗಳ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ ಅವರ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ಈಗ ಒದಗಿಸಿರುವ ಹಣ ಸಾಲದು. 27 ವರ್ಷಗಳಿಂದ ನಾವು ಹಿಂದುಳಿದ ವರ್ಗದವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿದ್ದೇವೆ. ಆದರೆ ಅವರ ಬಗ್ಗೆ ಮಾಡಿರತಕ್ಕ ಕೆಲಸ ಸಾಲದು. ಮೊನ್ನೆ ತಾನೆ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಹೇಳಿದರು. ಹರಿಜನಗಿರಿಜನ ಫೈನಾನ್ಸ್ ಕಾರ್ಪೋರೇಷನ್ ಬರುತ್ತದೆ ಎಂದು. ಆದರೆ ಅದು ಯಾವೊತ್ತು ಅಸ್ತಿತ್ವಕ್ಕೆ ಬರುತ್ತದೆಯೋ ಎನ್ನುವ ಒಂದು ಸಂದೇಹ ನಮಗೆ ಇದೆ ಈಗ ಕಳೆದ 27 ವರ್ಷಗಳಿಂದ ಕೆಲವೇ ಫ್ಯಾಮಿಲಿಯವರು ಎಂ. ಪಿ ಗಳು, ಎಂ.ಎಲ್.ಎ ಗಳು, ಎಂ. ಎಲ್. ಸಿ ಗಳು ಆಗಿದ್ದಾರೆ. ಮಿಕ್ಕವರು ಆಗಿಲ್ಲ ಇದಕ್ಕೆ ಕಾರಣ ಇಷ್ಟೆ ಸರಕಾರದವರು ಮಾಡತಕ್ಕ ಯೋಜನೆಗಳು ಏನಿವೆ ಇವು ಗ್ರಾಮ ಮಟ್ಟಕ್ಕೆ ಹೋಗಿಲ್ಲ. ಇವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಮಟ್ಟದಲ್ಲೇ ನಿಂತು ಹೋಗಿವೆ. ಆದ್ದರಿಂದ ಈ ಯೋಜನೆಗಳನ್ನು ಕೆಳಮಟ್ಟದಿಂದ ಎಂದರೆ ಗ್ರಾಮ ಮಟ್ಟದಿಂದ

(ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು)

ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದರೆ ಹರಿಜನ ಗಿರಿಜನರು ಮತ್ತು ಹಿಂದುಳಿದ ವರ್ಗದವರು ಮುಂದೆ ಬರುವುದಕ್ಕೆ ಸಹಾಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ಇನ್ನು ಲೆದರ್ ಇಂಡಸ್ಟ್ರಿಯ ಬಗ್ಗೆ ಹೇಳಬೇಕಾದರೆ ಲೆದರ್ ಇಂಡಸ್ಟ್ರಿ ಬೋರ್ಡ್ ಮಾಡಿ ಎರಡು ವರ್ಷ ಆಯಿತು. ಅವರಿಗೆ ಬೇಕಾದ ಎಕ್ವಿಪ್‌ಮೆಂಟ್ ಮತ್ತು ಸ್ಟಾಫ್ ಕೊಟ್ಟಿಲ್ಲ ಎಂದು ಗೊತ್ತಾಯಿತು. ಲೆದರ್ ಬೋರ್ಡ್ ಮುಖಾಂತರ ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಾದರೆ ಅದರಲ್ಲಿ ಬೇಕಾದಷ್ಟು ಹಣ ಬರುತ್ತದೆ. ಈ ಲೆದರ್ ಇಂಡಸ್ಟ್ರಿ ಬಹಳ ದೊಡ್ಡ ಇಂಡಸ್ಟ್ರಿ. ತಮಗೆ ಗೊತ್ತಿರಬಹುದು ವಾನಂಬಾಡಿಯ ಒಂದು ಕೋಮಿನವರಿಗೆ ಇದು ಸೀಮಿತವಾಗಿದೆ. ಈಗ ಲೆದರ್ ಇಂಡಸ್ಟ್ರಿಯಲ್ಲಿ ಬೇಕಾದಷ್ಟು ಸ್ಪೆಷಲಿಸ್ಟ್ ಬಂದಿದ್ದಾರೆ. ಇದು ಬಹಳ ಪ್ರಾಮುಖ್ಯವಾದದ್ದು. ನಮ್ಮ ರಾಜ್ಯದಲ್ಲಿ 17 ಪರ್ಸೆಂಟ್ ಕ್ಯಾಟಲ್‌ವೆಲ್ತ್ ಇದೆ. ಇದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು. ಲೆದರ್ ಇಂಡಸ್ಟ್ರಿಗೆ ಹೆಚ್ಚಿನ ಹಣವನ್ನು ಕೊಟ್ಟು ಗ್ರಾಮಾಂತರ ಪ್ರದೇಶದಲ್ಲಿ ಇದನ್ನು ಬೆಳೆಸುವುದಕ್ಕೆ ಉತ್ತೇಜನ ಕೊಡಬೇಕು.

ಬಾವಿಗಳ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ ಹರಿಜನ ಗಿರಿಜನರಿಗೆ ಬೇರೆ ಬಾವಿ ತೋಡಿದರೆ ಏನು ಪ್ರಯೋಜನವಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರಲ್ಲೇ ಎಡಗೈನವರು ಮತ್ತು ಬಲಗೈನವರು ಎಂದು ಬೇರೆ ಬೇರೆ ಭಾವನೆ ಇದೆ. ಆದ್ದರಿಂದ ಹರಿಜನಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಸೋಷಿಯಲ್ ಜಸ್ಟೀಸ್ ಸಿಕ್ಕಬೇಕು. ಆದ ಕಾರಣ ಬಾವಿಗಳನ್ನು ತೋಡಿ ಓವರ್ ಹೆಡ್ ಟ್ಯಾಂಕ್ ಕಟ್ಟಿ ಅದಕ್ಕೆ ಕೊಳಾಯಿ ಹಾಯಿಸಿ ಎಲ್ಲರೂ ಅದರಲ್ಲಿ ನೀರು ತೆಗೆದುಕೊಳ್ಳುವಂತೆ ಮಾಡಬೇಕು. ಆಗ ಸೋಷಿಯಲ್ ಜಸ್ಟೀಸ್ ಬರುತ್ತದೆ. ಈಗ ಬೆಂಗಳೂರು ನಗರದಲ್ಲಿ ನಲ್ಲಿಗಳಲ್ಲಿ ಎಲ್ಲಾ ಜನಗಾಂಗದವರೂ ನೀರು ತೆಗೆದುಕೊಂಡು ಬರುವ ಹಾಗೆ ಗ್ರಾಮಾಂತರ ಪ್ರದೇಶದಲ್ಲಿಯೂ ಓವರ್ ಹೆಡ್ ಟ್ಯಾಂಕ್‌ಗಳಲ್ಲಿರತಕ್ಕ ಕೊಳಾಯಿ ಮೂಲಕ ಎಲ್ಲಾ ಜನಾಂಗದವರೂ ನೀರನ್ನು ತೆಗೆದುಕೊಂಡು ಬರುವುದಕ್ಕೆ ಅವಕಾಶ ಮಾಡಿಕೊಡಬೇಕು. ಹರಿಜನಗಿರಿಜನರನ್ನು ಹಿಂದುಳಿದ ಜನಗಳನ್ನು ಶ್ರಮಜೀವಿಗಳನ್ನು ಸಾಮಾನ್ಯವಾಗಿ ಊರಿನ ಹೊರಗೆ ಹಾಕಿರುತ್ತಾರೆಂದು ನಾನು ಹೇಳಿದ್ದೇನೆ. ಇದು ಸರಿಯಲ್ಲ. ಅವರಿಗೆ ಊರಿನ ಮಧ್ಯದಲ್ಲಿ ವಾಸ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಆ ತರಹ ಮಾಡಿದರೆ ಮಾತ್ರ ಸೋಷಿಯಲ್ ಜಸ್ಟೀಸ್ ಸಿಕ್ಕುತ್ತದೆ

ಒಳ್ಳೆಯ ಎನ್‌ವೈರ್ನಮೆಂಟ್ ಸಿಕ್ಕುತ್ತದೆ ಇಲ್ಲದೇ ಹೋದರೆ ಅವರು 20ವರ್ಷ ನೂರು ವರ್ಷಗಳಾದರೂ ಕೂಡ ಅವರು ಹೀಗೆಯೇ ಇರುತ್ತಾರೆ. ಆ ಮೇಲೆ ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಮಾಡಬೇಕು. ಮಾಸ್ ಮ್ಯಾರೇಜ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಬಡವರು ಮದುವೆ ಮಾಡುವುದಕ್ಕೆ ಬೇಕಾದಷ್ಟು ಸಾಲ ಸೋಲ ಮಾಡಿಕೊಂಡು ಅದನ್ನು ತೀರಿಸುವುದಕ್ಕೆ ಆಗದೆ ತುಂಬಾ ತೊಂದರೆಗೆ ಒಳಗಾಗುತ್ತಾರೆ. ಆದ್ದರಿಂದ ಮಾಸ್ ಮ್ಯಾರೇಜ್ ಮಾಡಿದರೆ ಅವರಿಗೆ ಸೋಷಿಯಲ್ ಜಸ್ಟೀಸ್ ಸಿಕ್ಕುತ್ತದೆ.

ಹರಿಜನಗಿರಿಜನರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ವ್ಯವಸ್ಥೆಮಾಡಬೇಕು ಹಿಂದುಳಿದ ವರ್ಗದವರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಒದಗಿಸಬೇಕು ಅವರೂ ಸಹ ಬುದ್ಧಿ ಜೀವಿಗಳ ಮಟ್ಟಕ್ಕೆ ಬರುವುದಕ್ಕೆ ಅವಕಾಶವನ್ನು ಒದಗಿಸಬೇಕು. ಅವರಿಗೆ ಬಿಷಪ್ ಕಾಟನ್ ಸ್ಕೂಲುಗಳಲ್ಲಿ ಸಿಕ್ಕತಕ್ಕಂಥಾ ವಿದ್ಯಾಭ್ಯಾಸ ಸಿಕ್ಕುವುದಿಲ್ಲ. ಅದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಹರಿಜನ ಗಿರಿಜನರ ಮತ್ತು ಹಿಂದುಳಿದ ವರ್ಗದವರ ಮಕ್ಕಳಿಗೆ ಒಂದು ಒಳ್ಳೆಯ ವಿದ್ಯಾಭ್ಯಾಸ ಸಿಕ್ಕುವ ಹಾಗೆ ಮಾಡಬೇಕು. ಅವರಿಗೆ ನೆಹರು ಲೋಕ ಮತ್ತು ಬಾಲವಾಡಿಗಳಂತಹ ಶಾಲೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಅವರ ಮಕ್ಕಳನ್ನು ತಂದೆತಾಯಿಗಳಿಂದ ಬೇರೆ ಮಾಡಿ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಪ್ರಯತ್ನ ಮಾಡುವುದಾದರೆ ಅವರು ಮುಂದೆ ಬರುತ್ತಾರೆ ಇಲ್ಲದೇಹೋದರೆ ಅವರು ಮುಂದೆ ಬರುವುದಿಲ್ಲ ನಾನು ಒಂದು ಹೊಸ ಸಲಹೆಯನ್ನು ಮಾಡುತ್ತೇನೆ ಅದು ಏನೆಂದರೆ ಹರಿಜನ ಗಿರಿಜನರು ಎನ್ನುವ ಒಂದು ಭಾವನೆ ಹೋಗಬೇಕಾದರೆ ಪ್ರತಿಯೊಬ್ಬ ಸವರ್ಣ ಹಿಂದೂಗಳೂ ಒಂದು ಹರಿಜನ ಮಗುವನ್ನು ದತ್ತು ತೆಗೆದುಕೊಂಡರೆ ಹರಿಜನರೆಂಬ ಒಂದು ಭಾವನೆ ಮಾಯವಾಗುತ್ತದೆ. ಇದು ರಕ್ತವಾಗಿ ಬಂದಿದೆ ಇದು ಹೋಗಬೇಕು.

ಇನ್ನೊಂದು ವಿಷಯವೇನೆಂದರೆ ಸರ್ಕಾರದವರು ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುತ್ತಾರೆ. ಆದರೆ ಅವರಿಗೆ ಕಾಲಕ್ಕೆ ಸರಿಯಾಗಿ ಕೊಡದೇ ವರ್ಷದ ಕೊನೆಯಲ್ಲಿ ಕೊಟ್ಟರೆ ಅವರಿಗೆ ತೊಂದರೆಯಾಗುತ್ತದೆ. ಮೊನ್ನೆಯೆಲ್ಲಾ ಹಾಸ್ಟಲ್‌ನಲ್ಲಿ ಗಲಾಟೆ ನಡೆದದ್ದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಅವರಿಗೆ ಸ್ಕಾಲರ್‌ಷಿಪ್ ಕೊಡುವುದನ್ನು ವರ್ಷದ ಮೊದಲಲ್ಲೇ ಕೊಡಬೇಕು, ಹರಿಜನ ಗಿರಿಜನರ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಗ್ರಾಂಟ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಪೋಲೀಸಿನವರನ್ನು ಬೈಯದೇ ಇರತಕ್ಕವರು ಯಾರೂ ಇಲ್ಲ

ಅಧ್ಯಕ್ಷರು :—ಯಾವುದರ ಮೇಲೆ ಚರ್ಚೆಯಾಗಿಲ್ಲವೋ ಅದರ ಮೇಲೆ ಮಾತ್ರ ಮಾತನಾಡಬೇಕು.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು:—ಕೆಲವು ಸಂದರ್ಭಗಳಲ್ಲಿ ಹೇಳಬೇಕಾದ್ದು ಮರೆತು ಹೋಗಿರುತ್ತದೆ. ಅಂಥಾದ್ದನ್ನು ನಾನು ಈಗ ಹೇಳುತ್ತಿದ್ದೇನೆ. ಇನ್ನು ಮತ್ತೆ ಈ ಅಪ್ರೋಪ್ರಿಯೇಷನ್ ಬಿಲ್ ಬರುವುದು ಮುಂದಿನ ವರ್ಷಕ್ಕೆ. ಅದಕ್ಕೋಸ್ಕರ ಈಗ ಕೆಲವು ಸಲಹೆಗಳನ್ನು ಕೊಡದೇಹೋದರೆ ಆತ್ಮ ಸಂತೋಷವಾಗುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಬಗ್ಗೆ ಮಾತನಾಡುವುದಕ್ಕೆ ಅವಕಾಶವಾಗಲಿಲ್ಲ. ಈಗ ಬ್ಯಾಕ್‌ವರ್ಡ್ ಕಮಿಷನ್ ಮಾಡಿದ್ದಾರೆ. ಅದರ ವರದಿಯನ್ನು ಸದಸ್ಯರಲ್ಲೇ ಕೊಡುತ್ತೇವೆ. ಅದರಲ್ಲಿ ನಾನು ಒಬ್ಬ ಸದಸ್ಯನಾಗಿದ್ದೇನೆ. ಅದರ ಬಗ್ಗೆ ನಾನು ಹೆಚ್ಚು ಇಲ್ಲಿ ಕಮಿಟ್ ಮಾಡಿಕೊಳ್ಳುವುದಿಲ್ಲ. ಹಿಂದುಳಿದ ಜನಾಂಗದವರು ಆರ್ಥಿಕವಾಗಿ ಯಾವರೀತಿ ಇದ್ದಾರೆ, ಸಾಮಾಜಿಕವಾಗಿ ಯಾವ ರೀತಿ ಇದ್ದಾರೆ, ಸಾಂಸ್ಕೃತಿಕವಾಗಿ ಯಾವರೀತಿ ಇದ್ದಾರೆ, ರಾಜಕೀಯವಾಗಿ ಯಾವ ರೀತಿ ಇದ್ದಾರೆ, ನೈತಿಕವಾಗಿ ಯಾವರೀತಿ ಇದ್ದಾರೆ ಎಂಬುದನ್ನು ನೋಡಬೇಕು. ಅವರಿಗೆ ಎಕನಾಮಿಕ್ ಪವರ್ ಇಲ್ಲದಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ.

4-30 P. M.

ನಮ್ಮ ಪ್ಲಾನ್ ಸ್ಕೀಮ್ಸ್ ಏನು ಇದೆ, ಅವುಗಳನ್ನು ಇದುವರೆಗೆ ನೋಡಿದಾಗ ಬರೀ ವಿದ್ಯಾಭ್ಯಾಸಕ್ಕೆ ಸೀಮಿತವಾಗಿದೆ ಜನರಿಗೆ ವ್ಯಾಪಾರ ವ್ಯವಹಾರದ ಗಂಧವಿಲ್ಲ. ಇಂಡಸ್ಟ್ರೀಸ್ ಮತ್ತು ಕಾಮರ್ಸ್‌ನಲ್ಲಿ ಎಷ್ಟು ಜನ ಪ್ರವೀಣರಾಗಿದ್ದಾರೋ ಅವರಿಗೂ ಸಹಿತ ಕೆಲವು ಸಂದರ್ಭದಲ್ಲಿ ಸಹಾಯ ಮಾಡಬೇಕು. ನ್ಯಾಶನಲೈಸ್ಡ್ ಬ್ಯಾಂಕುಗಳು ಏನು ಇವೆ, ಅವು ಅವರಿಗೆ ಅಸ್ಸೂರೆನ್ಸ್ ಇಲ್ಲದಿದ್ದರೆ ಹಣ ಕೊಡುವುದಿಲ್ಲ. ಇವರಿಗೆ ಸಣ್ಣ ಸ್ಕೀಮ್ ಹಾಕಿಕೊಟ್ಟು, ಅಟೋರಿಕ್ಷ ಕೊಂಡುಕೊಳ್ಳಲಿಕ್ಕೆ ಮತ್ತು ಸಣ್ಣ ಸಣ್ಣ ವ್ಯಾಪಾರ ಮಾಡಲಿಕ್ಕೆ ಹಣ ಕೊಡಬೇಕು. ಬಸ್ ಲಾರಿಗಳನ್ನು ಇಡಲಿಕ್ಕೆ ಸ್ವಲ್ಪ ಅಡ್ವಾನ್ಸ್ ಕೊಡಬೇಕು. ನ್ಯಾಷನಲೈಸ್ಡ್ ಬ್ಯಾಂಕುಗಳು ದೊಡ್ಡ ದೊಡ್ಡ ಹೋಟಲುಗಳಿಗೆ ಕೊಡುತ್ತಾರೆ. ಮೂರು ಸ್ಟಾರ್ ನಾಲ್ಕು ಸ್ಟಾರ್ ಹೋಟಲುಗಳಿಗೆ ಸಾಲ ಕೊಡುತ್ತಾರೆ. ಬಡವರಿಗೆ ಸಣ್ಣ ಸಣ್ಣ ಹೋಟಲುಗಳಿಗೆ ಸಹಾಯ ಮಾಡಿದರೆ ಅವರಿಗೆ ಅದರಿಂದ ಆದಾಯ ಬರುತ್ತದೆ. ಈಗಿನ ಕಾಲದ ಪರಿಸ್ಥಿತಿಯಲ್ಲಿ ಹೋಟಲು, ಸಿನೆಮಾ ಇಂಡಸ್ಟ್ರೀಸ್‌ನಲ್ಲಿ ಬರುವ ದುಡ್ಡು ಬೇರೆ ಯಾವುದರಲ್ಲೂ ಬರುವುದಿಲ್ಲ ಹಿಂದುಳಿದ ಜನಾಂಗ ಎಷ್ಟು ಜನ ಈ ಕೈಗಾರಿಕೆ ಮಾಡಿದ್ದಾರೆ. ಅವರಿಗೆ ಕಂಟ್ರಾಕ್ಟ್ ಮಾಡಲಿಕ್ಕೆ ಗೊತ್ತಿಲ್ಲ. ಹಿಂದುಳಿದ ಜನಾಂಗದವರು ಮಣ್ಣು ಕೆಲಸ ಕಲ್ಲು ಕೆಲಸ ಕಂಟ್ರಾಕ್ಟ್ ಮಾಡು

ತ್ತಾರೆ. ದೊಡ್ಡ ಬಿಲ್ಡಿಂಗ್ ಕಂಟ್ರಾಕ್ಟ್ ಮಾಡುವುದಕ್ಕೆ ಅವರಿಗೆ ಸೀಡ್‌ಮನಿ ಇಲ್ಲ ಆದುದರಿಂದ ಬಡ ಜನಕ್ಕೆ ಸಹಾಯ ಮಾಡಲು 10 ಕೋಟಿ ರೂಪಾಯಿ ಸಾಲದು ಅವರಿಗೆ 20-30 ಕೋಟಿ ಕೊಟ್ಟರು ತಪ್ಪಾಗುವುದಿಲ್ಲ. ನಮ್ಮಲ್ಲಿ ಶ್ರಮ ಜೀವಿಗಳು ಮತ್ತು ಬುದ್ಧಿಜೀವಿಗಳು ಎಂದು ಎರಡು ವಿಧದ ಜನರು ಇದ್ದಾರೆ. ಪ್ಲಾನ್ ಸ್ಕೀಂ ಪ್ರಯೋಜನ ಎಲ್ಲಾ ಬುದ್ಧಿ ಜೀವಿಗಳಿಗೆ ಸಿಕ್ಕುತ್ತದೆ. ಬಡ ಜನಕ್ಕೆ ಸಿಗುವುದಿಲ್ಲ ಕಾರ್ಪೋರೇಷನ್ ಮಾಡಿದ್ದೀರಿ. ಅವರು ಸೀಡ್‌ಮನಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಕ್ವಾರಿಯಿಂಗ್ ಕಾರ್ಪೋರೇಷನ್‌ನ ಉಪಯೋಗ ಅನೇಕ ಜನಕ್ಕೆ ಗೊತ್ತಿಲ್ಲ. ಹಿಂದುಳಿದ ಜನಾಂಗ, ಕಲ್ಲು ಒಡೆಯುವ ಒಡ್ಡರು ಅವರಿಗೆ ಕ್ವಾರಿಯಿಂಗ್ ಕಾರ್ಪೋರೇಷನ್ ಮಾಡಿದರೆ ಅನುಕೂಲ. ನಮ್ಮಲ್ಲಿ ಖನಿಜ ಸಂಪತ್ತು ಬೇಕಾದಷ್ಟಿದೆ. ಕೋಲಾರ ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ಕಲ್ಲು ಬೇಕಾದಷ್ಟಿದೆ. ಹಿಂದುಳಿದ ಜನಾಂಗದ ಸಲುವಾಗಿ ಕ್ವಾರಿಯಿಂಗ್ ಕಾರ್ಪೋರೇಷನ್ ಮಾಡಿ ಕೊಟ್ಟರೆ ಅವರು ಬೇಕಾದಷ್ಟು ಹಣ ಸಂಪಾದನೆ ಮಾಡಬಹುದು. ದೊಡ್ಡ ಬಳ್ಳಾಪುರದ ಸುಬ್ಬರಾಯರು ಪರದೇಶಕ್ಕೆ ಕಲ್ಲುಗಳನ್ನು ರಫ್ತು ಮಾಡಿ ಬೇಕಾದಷ್ಟು ಹಣ ಸಂಪಾದನೆ ಮಾಡಿರಬಹುದು. ಆದುಧರಿಂದ ಕ್ವಾರಿಯಿಂಗ್ ಕಾರ್ಪೊರೇಷನ್ ಮಾಡಿದರೆ ಹಿಂದುಳಿದ ಜನಾಂಗದವರು ಮುಂದೆ ಬರುವುದಕ್ಕೆ ಸಹಾಯವಾಗುತ್ತದೆ. ಇವರಿಗೆ ಹಣ ಸಿಗಲಿಕ್ಕೆ ಸಹಾಯವಾಗುತ್ತದೆ. ನ್ಯಾಷನಲೈಸ್ಡ್ ಬ್ಯಾಂಕುಗಳೇನಿವೆ ಅವು ಬೇಕಾದಷ್ಟು ಪ್ಲಾನ್ ಸ್ಕೀಮ್‌ಗಳನ್ನು ಹಾಕುತ್ತವೆ. ಹಿಂದುಳಿದ ಜನಾಂಗದ ಬಗ್ಗೆ ಪ್ಲಾನ್ ಹಾಕಬೇಕು. ನನ್ನ ಅನುಭವದಲ್ಲಿ ಜನರಿಗೆ ಆರ್ಥಿಕ ಶಕ್ತಿ ಬರಬೇಕಾದರೆ ಈ ಒಂದು ಕಾರ್ಪೊರೇಷನ್ ಆಗಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಪ್ರೋಪ್ರಿಯೇಷನ್ ಬಿಲ್ ಏನಿದೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಆಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ ಕಕ್ಕಿಲಾಯ (ಬಂಟವಾಳ) :—ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಅಂತರಾಷ್ಟ್ರೀಯ ಮಹಿಳೆಯರ ವರ್ಷದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ನಾನು ಉದ್ದೇಶಪಟ್ಟಿದ್ದೇನೆ. ಶ್ರೀಮತಿ ಸುಮತಿ ಮಡಿಮನ್‌ರವರು ವ್ಯಕ್ತಪಡಿಸಿದ ಭಾವನೆಗಳಿಗೆ ಈ ಕಡೆಯಿಂದ ಅಂದರೆ ಪ್ರತಿಪಕ್ಷದ ಕಡೆಯಿಂದ ಎಂದು ಅಲ್ಲ, ಪುರುಷರ ಭಾಗದಿಂದ ಸಂಪೂರ್ಣವಾಗಿ ಬೆಂಬಲ ಮತ್ತು ಸ್ವಾಗತ ವ್ಯಕ್ತಪಡಿಸಲಿಕ್ಕೆ ಅಪೇಕ್ಷೆ ಪಡುತ್ತೇನೆ. ಶ್ರೀಮತಿ ಮಡಿಮನ್‌ರವರು ಮತ್ತು ಈ ಸಬನದಲ್ಲಿರುವ ಎಲ್ಲಾ ಸಹೋದರಿಯರು ದಯಮಾಡಿ ಈ ಒಂದು ವರ್ಷದ ಒಳಗಡೆ ಮಂಗಳೂರು ಕಡೆ ಕೆಲಸ ಮಾಡುವ ಮಹಿಳೆಯರ ಮತ್ತು ಹೊಲಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳೆಯರ ಪರಿ

(ಶ್ರೀ ಬಿ. ವಿ. ಕಕ್ಕಿಲಾಯ)

ಸ್ಥಿತಿ ಏನಿದೆ ಎನ್ನುವುದನ್ನು ಕಣ್ಣಾರೆ ಕಂಡು ಅದಕ್ಕೆ ಸೂಕ್ತ ಪರಿಹಾರವನ್ನು ಸೂಚಿಸುವ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಗೋಡಂಬಿ ಕಾರ್ಖಾನೆಯಲ್ಲಿ ಕೆಲಸ ಮಾಡುವ ಮಹಿಳೆಯರಿದ್ದಾರೆ. ಅವರ ಕೈ ನೋಡಿದರೆ ಎಲ್ಲಾ ಬೆಂದು ಹೋಗಿರುತ್ತದೆ. ಅವರಿಗೆ ಅಷ್ಟು ಕಷ್ಟವಾದ ಕೆಲಸವಿದ್ದರೂ, ಪುರುಷರಷ್ಟು ಸಂಬಳವಿಲ್ಲ. ಇವರಿಗೆ ಮಿನಿಮಮ್ ವೇಜಸ್ ತಪ್ಪಿಸುವುದಕ್ಕೆ ಬಹಳ ದಯಾವಂತರು ಮೊದಲಾದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆ. ಬೀಡಿ ಕಾರ್ಮಿಕರನ್ನು ನೋಡಬೇಕು, 10 ವರ್ಷಗಳು ಆಗುವಾಗ ಹೆಣ್ಣುಮಕ್ಕಳು ಬೀಡಿ ಸುತ್ತಲು ಪ್ರಾರಂಭ ಮಾಡಿದರೆ 20-30 ವರ್ಷಗಳ ವರೆಗೂ ಬೀಡಿ ಸುತ್ತುತ್ತಿರುತ್ತಾರೆ. ಆಮೇಲೆ ನೆಟ್ಟಗೆ ಟಿ ಬಿ ಆಸ್ಪತ್ರೆಗೆ ಹೋಗುತ್ತಾರೆ. ಅವರ ಮಕ್ಕಳಿಗೂ ಇಂಥ ಕಾಯಿಲೆ ಬರುತ್ತದೆ. ಈ ಬೀಡಿ ಕಾರ್ಖಾನೆಯಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳ ಪರಿಸ್ಥಿತಿ ಅಷ್ಟು ಧಾರುಣವಾಗಿದೆ. ಹೀಗೆಯೇ ಹಳ್ಳಿಗಳಲ್ಲಿಯ ಕೃಷಿ ಕಾರ್ಮಿಕರ ಸ್ಥಿತಿ ಧಾರುಣವಾಗಿದೆ. ಅದನ್ನು ವಿವರಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವರು ಏನು ಭಾವನೆ ವ್ಯಕ್ತಪಡಿಸಿದ್ದಾರೋ ಅವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರತ್ಯೇಕ ಸಚಿವೆಯರನ್ನು ನೇಮಕ ಮಾಡಿದ್ದಾರೆ, ಅವರನ್ನು ಕೇಳಿದರೆ ಹಣವಿಲ್ಲ ಎಂದು ಹೇಳುತ್ತಾರೆ. ಅವರು ನಮ್ಮ ಊರಿಗೆ ಬಂದಿದ್ದಾಗ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ತಾಲ್ಲೂಕು ಆಫೀಸುಗಳಲ್ಲಿ ಕೆಲಸಮಾಡುವ ಒಂದು ನಿಯೋಗ ಅವರ ಬಳಿಗೆ ಹೋಗಿ ಬೇರೆ ಕಡೆಗಳಿಂದ ವರ್ಗವಾಗಿ ಬಂದಿರುವ ಮಹಿಳೆಯರಿಗೆ ಒಂದು ಹಾಸ್ಟೆಲ್ ಕಟ್ಟಿಸಿಕೊಡಬೇಕೆಂದು ಕೇಳಿದರೆ ಅದು ಇನ್ನೂ ಸಾಧ್ಯವಾಗುವ ಹಾಗೆ ಕಾಣುವುದಿಲ್ಲ, ಅದಕ್ಕೆ ಹಣವಿಲ್ಲವೆಂದು ಹೇಳಿದರು. ಅದು ಸಾಲ ಮಾಡುವುದು ಎಂದರೆ ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಸಣ್ಣ ಸಣ್ಣ ಟೌನ್‌ಗಳಲ್ಲಿ ಬೇರೆ ಊರುಗಳಿಂದ ವರ್ಗವಾಗಿ ಬರುವ ಹೆಣ್ಣುಮಕ್ಕಳಿಗೆ ಉಳಿದುಕೊಳ್ಳುವುದಕ್ಕೆ ಬೇಕಾದ ಹಾಸ್ಟೆಲ್ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನೂ ಕೂಡ ಸರ್ಕಾರದವರು ಮಾಡಬೇಕು. ಅದನ್ನು ಆದಷ್ಟು ಶೀಘ್ರವಾಗಿ ಕಾರ್ಯರೂಪಕ್ಕೆ ತರಬೇಕು. ಈ ಎರಡು ಸಲಹೆಗಳನ್ನು ತಮ್ಮ ಮುಂದೆ ಈ ಸಂದರ್ಭದಲ್ಲಿ ಇಡುತ್ತೇನೆ. ಇನ್ನೂ ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಭೂಸುಧಾರಣಾ ಕಾನೂನು ಜಾರಿಗೆ ಬರಲಿಕ್ಕೆ ಪ್ರಾರಂಭವಾಗಿದೆ. ಇವತ್ತು ಲ್ಯಾಂಡ್ ಟ್ರಿಬ್ಯೂನಲ್ ಖರ್ಚಿಗೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಇನ್ನು ಮುಂದಿನ ವರ್ಷಕ್ಕಾದರೂ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಸ್ಟೇಷನರಿಯನ್ನು ಕೂಡ ನಾವು ಕ್ರಯಕ್ಕೆ ಕೊಂಡುಕೊಳ್ಳಬೇಕಾಗಿದೆ. ಇದನ್ನು ಸರ್ಕಾರದವರು ಗಮನಿಸಿ ಹಣ ಒದಗಿಸಬೇಕೆಂದು ಹೇಳುತ್ತೇನೆ. ಇನ್ನು ಪೋಲೀಸು ಇಲಾಖೆಯ ಬಗ್ಗೆ ಒಂದು ಹೊಸ ವಿಚಾರವನ್ನು

ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಭಾಸ್ಕರ್ ಸೇವಿಂತ ಘಟನೆಯ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆ ನಡೆದಿದೆ.

ಅಧ್ಯಕ್ಷರು :—ಆ ಬೇಡಿಕೆಯು ಚರ್ಚೆಗೆ ತಿರುಗಿ ಹೋಗಲು ಸಾಧ್ಯವಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ:—ಅದರ ಹಿನ್ನೆಲೆಯಲ್ಲಿ ಇವತ್ತು ಏನು ಆಗುತ್ತಿದೆ ಎಂದರೆ ಆ ಪ್ರದೇಶದಲ್ಲಿ ಒಬ್ಬರು ಇನ್ಸ್ಪೆಕ್ಟರರು ಸಮೇತವಾಗಿ ಸುಮಾರು 30 ಮಂದಿಯನ್ನು ಅರೆಸ್ಟ್ ಮಾಡಿದ್ದಾರೆ. ಅದರ ಬಗ್ಗೆ ಕೇಸು ನಡೆಯುತ್ತಾ ಇದೆ. ಇದು ಸಬ್‌ಜ್ಯೂಡಿಸ್ ಎಂದು ಗೊತ್ತು. ಇವತ್ತು ಅದರ ಬಗ್ಗೆ ಹೇಳು ತ್ತಿಲ್ಲ. ಅಲ್ಲಿ ಒಂದು ಹೊಸ ವಾತಾವರಣ ನಿರ್ಮಾಣವಾಗಿದೆ. ಆ ಪ್ರದೇಶದಲ್ಲಿ ನಿರ್ದೋಶಿಗಳಾದ ಜನರನ್ನೂ ಕೂಡ ಕೆಲವು ಭೂಮಾಲೀಕರು ಲಿಸ್ಟ್ ಕೊಟ್ಟು ಅಂಥ ವರನ್ನು ಬಂಧನ ಮಾಡಿಸಿ ಪೋಲೀಸು ಸ್ಟೇಶನ್ನಿನಲ್ಲಿ ಅವರಿಗೆ ಕಿರುಕುಳ ಕೊಡು ತ್ತಿದ್ದಾರೆ. ಇದನ್ನು ದಯಮಾಡಿ ಮುಖ್ಯ ಮಂತ್ರಿಗಳೂ ಸರ್ಕಾರದವರೂ ಗಮನಿಸಬೇಕು. ಅಂಥದಕ್ಕೆ ಅವಕಾಶ ಕೊಡಬಾರದು ಎಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ

ಇನ್ನು ಮೆಡಿಕಲ್ ಸರ್ವಿಸಸ್ ಮತ್ತು ಫ್ಯಾಮಿಲಿ ಪ್ಲಾನಿಂಗ್ ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದಿದ್ದೇನೆ. ನಮ್ಮಲ್ಲಿ 93 ವರ್ಷಗಳ ಹಿಂದಿನ ಆಸ್ಪತ್ರೆ ಇದೆ. ಅದು ಇಷ್ಟರಲ್ಲೇ ಮುರಿದು ಬೀಳುವ ಸ್ಥಿತಿಯಲ್ಲಿದೆ.

ಅಧ್ಯಕ್ಷರು :—ಅದು ಯಾವುದನ್ನೂ ಈಗ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬಿ. ಕಕ್ಕಿಲಾಯ :—ಕೆಲವು ಹೊಸ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ.

ಅಧ್ಯಕ್ಷರು :—ಆ ವಿಷಯಗಳನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಆಗುವುದಿಲ್ಲ

ಶ್ರೀ ಬಿ. ವಿ. ಕಕ್ಕಿಲಾಯಿ :—ಹಾಗಾದರೆ ನಾನು ಸರ್ಕಾರಕ್ಕೆ ಪತ್ರ ಬರೆದು ತಿಳಿಸುತ್ತೇನೆ

‡ಶ್ರೀ ಎನ್. ರಾಚಯ್ಯ (ಸಮಾಜ ಕಲ್ಯಾಣ ಮತ್ತು ಸಮಾಜ ಅಭಿವೃದ್ಧಿ ಶಾಖೆಗಳ ಮಂತ್ರಿಗಳು)

ಮಾನ್ಯ ಅಧ್ಯಕ್ಷರೇ,

ಶ್ರೀ ಜೆ. ಎಲ್. ಅಮ್ಮಣ್ಣನವರ್:– ಮಾನ್ಯ ಮಂತ್ರಿಗಳು ಹಿಂದುಳಿದವರಿಗೆ ರಾಜ್ಯಾಂಗದ ಪ್ರಕಾರವಾಗಿ ಶೇಕಡ 18ರಷ್ಟು ಮೀಸಲು ಸ್ಥಾನಗಳಿವೆ ಮತ್ತು ಅವರಿಗೆ ಎಲ್ಲ ರಕ್ಷಣೆಗಳನ್ನೂ ಒದಗಿಸಬೇಕೆಂದು ತಾವು ಹೇಳುತ್ತಲೆ ಬರುತ್ತಿದ್ದೀರಿ. ನಿಮ್ಮ ಇಲಾಖೆಯಲ್ಲಿ ತಾವು ಸುಧಾರಣೆ ಮಾಡಬೇಕೆಂದು ಹೇಳುತ್ತ ಬರುತ್ತಿದ್ದೀರಿ. ಹೀಗೆ ಮಾಡುವಾಗ ತಮ್ಮ ಇಲಾಖೆಗೆ ಸೇರಿದ ಒಬ್ಬರು ಬಿ. ಡಿ. ಓ ಅಧಿಕಾರಿಗಳನ್ನ ಎರಡು ತಿಂಗಳು ಅವಧಿಯೊಳಗೆ ಅವರನ್ನು ಐದು ಬಾರಿ ಟ್ರಾನ್ಸ್‌ಫರು ಮಾಡಿದ್ದೀರಿ? ಇದು ತಮ್ಮ ಗಮನಕ್ಕೆ ಬಂದಿಲ್ಲವೇ? ಹೀಗೆ ಮಾಡುವುದು ಸರಿಯೇ? ಇದರ ಬಗ್ಗೆ ತಾವು ಇಲ್ಲಿ ಉತ್ತರ ಕೊಡುವಾಗ ಹೇಳಿದರೆ ಸರಿಯಾಗುತ್ತದೆಯೇ?

*ಶ್ರೀ ಎನ್. ರಾಚಯ್ಯ:–ಮಾನ್ಯ ಸದಸ್ಯರು ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೂ ಪತ್ರ ಬರೆದಿದ್ದಾರೆ. ನನಗೂ ಬರೆದಿದ್ದಾರೆ ಮತ್ತು ಇದರ ವಿಚಾರಗಳನ್ನ ಪುನಃ ಇಲ್ಲಿ ಹೇಳುತ್ತಿದ್ದಾರೆ. ಇದಕ್ಕೆ ಕಾರಣ ಅನೇಕ ಮಾನ್ಯ ಸದಸ್ಯರುಗಳು ಸರಕಾರಕ್ಕೆ ಬಂದು ಹಾಗೂ ನನ್ನಲ್ಲಿ ಬಂದು ಒತ್ತಾಯ ಮಾಡುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ಹೀಗೆ ವರ್ಗಾವಣೆಗಳಾಗುತ್ತವೆ. ಬೇಕಾದರೆ ಮಾನ್ಯ ಸದಸ್ಯರುಗಳಿಗೆ ಎಷ್ಟು ಸಂದರ್ಭಗಳಲ್ಲಿ ಶಾಸಕರುಗಳು ವರ್ಗಾವಣೆಗಳಲ್ಲಿ ಕೈಹಾಕುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಕೆಲವು ಸದಸ್ಯರುಗಳು ಇಂತಹ ವರ್ಗಾವಣೆ ಬಗ್ಗೆ ಕಾಲಿಂಗ್ ಅಟನ್‌ಷನ್ ನೋಟೀಸುಗಳನ್ನು ಕೂಡ ಕಳುಹಿಸಿರುತ್ತಾರೆ. ಇದಕ್ಕಾಗಿ ನಾನು ಈ ಸಭೆಯ ಸದಸ್ಯರಲ್ಲಿ ವಿನಂತಿ ಮಾಡುವುದು ಯಾವ ಶಾಸಕರೇ ಆಗಲೀ ಸರಕಾರಕ್ಕೆ ಬಂದು ಅವರ ಪ್ರಭಾವವನ್ನು ವರ್ಗಾವಣೆಗಳನ್ನು ಮಾಡುವಾಗ ಒತ್ತಾಯ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ. ಹಾಗೆ ಒತ್ತಾಯ ಮಾಡುತ್ತಾ ಬಂದರೆ ಸರಕಾರ ತನ್ನ ಕಾರ್ಯಕ್ರಮಗಳನ್ನು ಚೆನ್ನಾಗಿ ಮಾಡುವುದಕ್ಕಾಗುವುದಿಲ್ಲ. ಇದಕ್ಕಾಗಿ ಇಲ್ಲೂ ಹೇಳಬೇಕಾದರೆ ಮಾನ್ಯ ಸದಸ್ಯರು ಹೇಳಿದಂತಹ ಬಿ ಡಿ ಓ. ರವರನ್ನು ವರ್ಗ ಮಾಡಲು ಕಾರಣ ಶಾಸಕರ ಒತ್ತಾಯದಿಂದಲೇ. ಇದರಲ್ಲಿ ನಾನು ಯಾವ ಪಕ್ಷದವರಿಗೂ ಹೇಳುತ್ತಿಲ್ಲ. ಸರಕಾರ ವರ್ಗಾವಣೆಗಳನ್ನು ಮಾಡುವಾಗ ನಿರ್ದಿಷ್ಟ ನಿಯಮಗಳನ್ನು ಹಾಕಿಕೊಂಡು ಅನುಸರಿಸುತ್ತಿರುವಾಗ ಆ ನಿಯಮಗಳಂತೆ ಸರಕಾರ ತನ್ನ ಕೆಲಸಗಳನ್ನು ಮಾಡಲು ಅವಕಾಶ ಮಾಡಿ ಕೊಡಬೇಕು. ಇದಕ್ಕಾಗಿ ನಾನು ಕೇಳಿಕೊಳ್ಳುವುದು ಆದಷ್ಟು ವರ್ಗಾವಣೆಗಳಲ್ಲಿ ಶಾಸಕರುಗಳು ಸರಕಾರವನ್ನು ಒತ್ತಾಯ ಮಾಡಬಾರದು ಎಂದು. ಇಲ್ಲಿ ಮಾನ್ಯ ಸದಸ್ಯರು ಹೇಳಿರುವ ವಿಚಾರಗಳಲ್ಲಿ ಎನ್‌ಕ್ವೈರಿ ನಡೆಯುತ್ತಿದೆ. ಇದಕ್ಕಾಗಿ ಅನಾವಶ್ಯಕವಾದ ಒತ್ತಾಯಗಳನ್ನು ಯಾರೂ ಸರಕಾರದ ಮೇಲೆ ತರಬಾರದು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಹೇಳಿದಂತೆ ನನಗೂ ತಿಳಿಸಿದ್ದಾರೆ. ಇದನ್ನು

ಇಲ್ಲಿ ಈ ಪ್ರಸ್ತಾಪ ಮಾಡಬಾರದಾಗಿತ್ತು. ಆದರೂ ಅವರು ಇಲ್ಲಿ ಹೇಳಿದುದರಿಂದ ಇಷ್ಟು ಮಾತ್ರ ಸಭೆಯ ಗಮನಕ್ಕೆ ತರಬೇಕಾಯಿತು.

ಈ ಸಂದರ್ಭದಲ್ಲಿ ನಾನು ಮೊದಲೇ ಅರಿಕೆ ಮಾಡಿಕೊಂಡಂತೆ ಸಮಾಜ ಕಲ್ಯಾಣ, ಗ್ರಾಮಾಭಿವೃದ್ಧಿ ಹಾಗೂ ಪಂಚಾಯತಿ ರಾಜ್ಯಗಳ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆಯಾಗಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು. ಆಗ ನಮ್ಮ ಇಲಾಖೆಯ ಅನೇಕ ಲೋಪ ದೋಷಗಳು ತಿಳಿಯಲು ಅನುಕೂಲ ವಾಗುತ್ತಿತ್ತು ಮತ್ತು ಉತ್ತಮವಾದ ಸಲಹೆಗಳೂ ಸರಕಾರಕ್ಕೆ ಬರುತ್ತವೆ ಎಂದು ಅಪೇಕ್ಷೆ ಮಾಡಿದ್ದೆ. ಆದರೆ ಅನಿವಾರ್ಯವಾದ ಕಾರಣಗಳಿಂದಾಗಿ ನಮ್ಮ ಇಲಾಖೆಯ ಚರ್ಚೆ ನಡೆಯಲು ಆಗಲಿಲ್ಲ. ಆದರೂ ಇಂದು ಅಪ್ರೋಪ್ರಿಯೇಷನ್ ಬಿಲ್ಲು ಚರ್ಚೆಯಾಗುವ ಸಂದರ್ಭದಲ್ಲಿ ನನ್ನ ಇಲಾಖೆಯ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಅವಕಾಶ ಮಾಡಿಕೊಂಡು ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ ಹಾಗೂ ಅನೇಕ ವಿಚಾರಗಳನ್ನೂ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ಸಲಹೆ ಮಾಡಿರತಕ್ಕ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅವನ್ನು ಸಹಾನು ಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಮತ್ತು ಅದಕ್ಕೆ ತಕ್ಕ ಕಾರ್ಯಕ್ರಮ ಗಳನ್ನು ಪ್ರಾಮಾಣಿಕವಾಗಿ ಮಾಡಲು ಪ್ರಯತ್ನ ಮಾಡುತ್ತೇನೆ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಕೆಲವಾರು ವಿಷಯಗಳನ್ನು ಆರೋಪ ಗಳನ್ನೂ ಲೋಪದೋಷಗಳನ್ನೂ ಕೂಡ ಎತ್ತಿ ಹಿಡಿದಿದ್ದಾರೆ. ಮಾನ್ಯ ಸದಸ್ಯ ರಾದ ಶ್ರೀ ಹನುಮೇಗೌಡರವರು ಮಾತನಾಡುತ್ತ ರೂರಲ್ ಡೆವಲಪ್‌ಮೆಂಟು ಹಾಗೂ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಬಗ್ಗೆ ಒಂದು ಕಾಂಪ್ರಿಹೆನ್ಸೀವ್ ಪ್ಲಾನ್‌ನ್ನು ರೂಪಿಸಬೇಕೆಂದರು. 1952 ನೇ ಇಸವಿಯಲ್ಲೇ ಪಂಚ ವಾರ್ಷಿಕ ಯೋಜನೆ ಮಾಡುವಾಗ ರಾಷ್ಟ್ರೀಯ ವಿಸ್ತರಣಾ ಯೋಜನೆ ಎಂದು ಮಾಡಿ ಇದರ ಮೂಲಕ ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದರು ಅದರಂತೆ ಈಗಲೂ ಎಲ್ಲ ಗ್ರಾಮಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡ ಬೇಕೆಂದು ಒತ್ತಾಯ ಮಾಡಿದ್ದಾರೆ. ಪಂಡಿತ ಜವಾಹರಲಾಲ್ ನೆಹರೂರವರು 1952ನೇ ಇಸವಿ ಅಕ್ಟೋಬರು ಎರಡರಂದು ಗಾಂಧಿ ಜಯಂತಿಯ ದಿವಸ ಇದರ ಬಗ್ಗೆ ಹೇಳಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನರು ನೂರಕ್ಕೆ 85 ರಿಂದ 90 ರವರೆಗೆ ಇದ್ದಾರೆ ಆದುದರಿಂದ ಗ್ರಾಮಾಂತರ ಪ್ರದೇಶ ಗಳ ಜನರು ಅಭಿವೃದ್ಧಿಗೆ ಹೆಚ್ಚು ಗಮನ ನೀಡಬೇಕು ಮತ್ತು ಹಳ್ಳಿಗಾಡಿನ ಮಕ್ಕಳ ಪುರೋಭಿವೃದ್ಧಿಗೆ ಹೆಚ್ಚು ಗಮನ ನೀಡಬೇಕು ಎಂದು ಹೇಳಿದರು, ನಮ್ಮ ದೇಶ ದಲ್ಲಿ ಪ್ರಜಾಪ್ರಭುತ್ವ ಇರುವಾಗ ಇದರ ಅವಶ್ಯಕತೆ ಬಹು ಹೆಚ್ಚು. ಹಿಂದೆ ಫೋರ್ಡ್ ಫೌಂಡೇಷನ್ ಮೆಂಬರಾದ ಶ್ರೀ ಡೊಗ್ಲಾಸ್‌ರವರು ಹೇಳಿದಂತಹ ಯೋಜನೆಗಳನ್ನು ಜಾರಿಗೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಅಂತಹ ಒಂದು ಯೋಜನೆ ಮೊದಲಿಗೆ ಆಗ ಆರಂಭವಾಯಿತು. ಆದರೆ ಅದು ಯಶಸ್ವಿ

(ಶ್ರೀ ಎನ್. ರಾಚಯ್ಯ)

ಯಾಗಿ ನಡೆಯಲು ಜನರು ಮುಂದೆ ಬರಲಿಲ್ಲ. ಆಗಿನಿಂದಲೂ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದರೂ ಕೂಡ ನಮ್ಮ ನಿರೀಕ್ಷೆಯ ಪ್ರಕಾರ ಇದರಲ್ಲಿ ಇನ್ನೂ ಸಾಕಷ್ಟು ಪ್ರಗತಿ ಸಾಧಿಸಲು ಆಗಲಿಲ್ಲ. ನಮಗೆಲ್ಲಾ ಗೊತ್ತಿರುವ ಹಾಗೆ ಬಡವರು ನೂರರಲ್ಲಿ ತೊಂಬತ್ತು ಭಾಗ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವವರೇ ಆಗಿದ್ದಾರೆ. ಇದರಲ್ಲಿ ಬಹು ಭಾಗದ ಜನರು ನಿರುದ್ಯೋಗಿಗಳಾಗಿದ್ದಾರೆ. ಇವರಿಗೆ ಆಗಾಗ ಅಲ್ಲಲ್ಲಿ ಕ್ಯಾಸುಯಲ್ ಲೇಬರರುಗಳು ಎಂದು ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆ ಮಾಡುವಾಗ ಇಂತಹ ಕಾರ್ಮಿಕರುಗಳಿಗೆ ಖಾಸಗಿ ಕ್ಷೇತ್ರದಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಮಾಡುವ ಜನರಿಗೆ ಕೂಲಿ ಕೆಲಸಗಳೂ ಸಿಗುವುದಿಲ್ಲ ಮತ್ತು ಇಂತಹ ಬಡ ಜನರಿಗೆ ಯಾವ ರೀತಿಯಾದ ಗ್ಯಾರಂಟಿಯಾದ ಕೆಲಸಗಳೂ ಸಿಗುತ್ತಿಲ್ಲ. ರೈತಾಪಿ ಜನರು ಬಹು ಜನ ಬಡವರೇ ಆಗಿರುವುದರಿಂದ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕಾದ್ದು ಸರಕಾರದ ಕರ್ತವ್ಯವೂ ಆಗಿದೆ. ಇಂತಹವರಿಗೆ ಯಾವ ರೀತಿಯಾದ ಯೋಜನೆ ಮಾಡಬಹುದು ಎಂದು ಸರಕಾರ ಹಾಗೂ ನಾವುಗಳು ಎಲ್ಲರೂ ಯೋಚನೆ ಮಾಡಬೇಕಾಗಿದೆ. ಇದಕ್ಕಾಗಿ ಹರಿಜನರೇ ಇಂತಹ ಇಲಾಖೆಗೆ ಮಂತ್ರಿಗಳಾಗಿದ್ದರೆ ಒಳ್ಳೆಯದು ಎಂದು ಕೆಲವರು ಸಲಹೆ ಮಾಡಿದರು. ಆದರೆ ನಾನು ಇದಕ್ಕೆ ಬದಲಾಗಿ ಒಂದು ಸಲಹೆ ಮಾಡಬೇಕೆಂದು ಇದ್ದೇನೆ. ಬಡ ಜನರು ಎಂದು ಬರೀ ಹರಿಜನರಲ್ಲೇ ಅಲ್ಲ. ಇಂತಹ ಮುಂದುವರೆದ ವರ್ಗಗಳಲ್ಲೂ ಇರುತ್ತಾರೆ. ಇದಕ್ಕಾಗಿ ಎಲ್ಲ ವರ್ಗಗಳಲ್ಲೂ ಇರುವ ಬಡ ಜನರು ಮುಂದುವರಿಯುವಂತೆ ತಕ್ಕ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಕಳೆದ 27 ವರ್ಷಗಳಿಂದಲೂ ಮುಂದುವರಿದ ವರ್ಗಗಳಲ್ಲಿರುವ ಬಡವರು ಇನ್ನೂ ಅಭಿವೃದ್ಧಿಗೆ ಬಂದಿಲ್ಲ. ಅದರಂತೆ ಹರಿಜನರಲ್ಲೂ ಹಾಗೂ ಗ್ರಾಮಗಳಲ್ಲಿ ಇರುವ ಬಡಜನರ ಸ್ಥಿತಿಯೂ ಆಗಿದೆ ಹರಿಜನರಿಗೇನೋ ರಾಜ್ಯಾಂಗದತ್ತವಾದ ಸೌಕರ್ಯಗಳಿವೆ ಎಂದು ಹೇಳಬಹುದು. ಅದನ್ನು ನಾನೂ ಒಪ್ಪುತ್ತೇನೆ. ಅನೇಕ ಕಡೆಗಳಲ್ಲಿ ಸಣ್ಣಪುಟ್ಟ ಕೈಗಾರಿಕೆಗಳು ಇರುತ್ತವೆ. ಖಾದಿ ಕೈಗಾರಿಕೆಗಳಿವೆ, ಹಾಗೂ ಅಪ್ಲೈಡ್ ನ್ಯೂಟ್ರೀಷನ್ ಪ್ರೋಗ್ರಾಂಗಳಿವೆ, ಕಮ್ಯುನಿಟಿ ಸೆಂಟರುಗಳಿವೆ ಹಾಗೂ ಇನ್ನಿತರ ವೆಲ್‌ಫೇರು ಸೆಂಟರುಗಳಿವೆ ಮತ್ತು ಇನ್ನು ಕೆಲವು ಕಡೆ ಆಶ್ರಮಗಳಲ್ಲಿ ಕೆಲವರು ಕೆಲಸ ಮಾಡುತ್ತಿದ್ದಾರೆ. ಎಲ್ಲ ಕಡೆಗಳಲ್ಲೂ ಹಾಲಿನ ಉತ್ಪಾದನಾ ಕೇಂದ್ರಗಳನ್ನು ಮಾಡಬಹುದು. ಇದರ ಮೂಲಕ ಕೆಲವು ಜನರಿಗೆ ಕೆಲಸಗಳು ಸಿಗಲು ಸಹಾಯವಾಗುತ್ತವೆ ಮತ್ತು ಕ್ರಾಷ್ ಪ್ರೋಗ್ರಾಂ ಎಂದು ಬೇರೆ ಇದೆ. ಸಂಬಂಧಪಟ್ಟ ಇಲಾಖೆಯವರು ಇದರ ಬಗ್ಗೆ ಕೆಲಸ ಮಾಡುತ್ತಿದ್ದರೂ ಇದುವರೆಗೆ ಸಾಕಷ್ಟು ಪ್ರಗತಿ ಇದರಲ್ಲಿ ಕಾಣುತ್ತಿಲ್ಲ. ಆದರಲ್ಲೂ ಇಂದು ಗ್ರಾಮಾಂತರ ಪ್ರದೇಶದಲ್ಲಿ ಜನಸಂಖ್ಯೆ ಬಹಳ ಹೆಚ್ಚಾಗಿದೆ

ಆದರೆ ಪಟ್ಟಣದಲ್ಲಿ ಜನಸಂಖ್ಯೆ ಕಡಿಮೆಯಾಗಿದೆ ಎಂದು ನಮಗೆ ಗೊತ್ತಾಗುತ್ತದೆ. ಇದಕ್ಕೆ ಕಾರಣ ಪಟ್ಟಣಗಳಲ್ಲಿರುವವರು ಸ್ವಲ್ಪ ಬುದ್ಧಿವಂತರಾಗಿ ತಿಳುವಳಿಕೆಯುಳ್ಳವರಾಗಿರುವುದರಿಂದ ಇಲ್ಲಿ ವನಸಂಖ್ಯೆ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ. ಆದರೆ ಹಳ್ಳಿಗಾಡಿನಲ್ಲಿರುವ ಜನರು ಬಹುತೇಕ ತಿಳುವಳಿಕೆ ಇಲ್ಲದವರು ಹಾಗೂ ಅನುಭವ ಇಲ್ಲದವರೇ ಆಗಿರುವುದರಿಂದ ಇಲ್ಲಿ ಮಕ್ಕಳೂ ಹೆಚ್ಚು ಮತ್ತು ಜನಸಂಖ್ಯೆ ಪ್ರಮಾಣ ಕೂಡ ಹೆಚ್ಚಾಗಿದೆ. ಇದಕ್ಕಾಗಿ ಗ್ರಾಮಾಂತರ ಜನರ ಅಭಿವೃದ್ಧಿ ಬಗ್ಗೆ ಸಾಕಷ್ಟು ವಿಶೇಷ ಎಚ್ಚರಿಕೆ ವಹಿಸಿ ತಕ್ಕ ಯೋಜನೆಗಳನ್ನು ರೂಪಿಸಬೇಕಾಗಿದೆ ಮತ್ತು ಇದಕ್ಕಾಗಿ ಸೂಕ್ತವಾದ ಪ್ಲಾನು ಮಾಡಿಕೊಂಡು ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸುವುದರ ಕಡೆಗೆ ಲಕ್ಷ್ಯಕೊಡಬೇಕಾದ್ದು ಅಗತ್ಯ. ಶ್ರೀಮಾನ್ ಹನಮೇಗೌಡರು ಹೇಳಿದ ಹಾಗೆ ಯಾರು ನಿರ್ಗತಿಕರಾಗಿದ್ದಾರೋ ಹಾಗೂ ಸಮಾಜದಲ್ಲಿ ಬಹು ನಿಕೃಷ್ಟವಾಗಿದ್ದಾರೆ ಎಂದು ಇರುವ ಜನಕ್ಕೆ ಅವರು ಜೀವನ ಮಾಡಿಕೊಳ್ಳಲು ತಕ್ಕ ರಕ್ಷಣೆ ಕೊಡಬೇಕಾದುದು ಅಗತ್ಯ ಮತ್ತು ರಾಜ್ಯಾಂಗಬದ್ಧವಾದ ಹಕ್ಕುಬಾಧ್ಯತೆಗಳೂ ಇವರಿಗಿರುವುದರಿಂದ ಇವರಿಗೆ ತಕ್ಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನಮ್ಮ ರಾಜ್ಯಾಂಗದಲ್ಲಿ ಇರುವ 46 ಆರ್ಟಿಕಲ್ಲಿನಲ್ಲಿ ಯಾವ ರೀತಿ ಸೌಲಭ್ಯಗಳನ್ನು ಕೊಡಬೇಕೆಂದು ಅದರ ವಿವರಗಳೆಲ್ಲ ಇವೆ. ಅದನ್ನು ಮಾಡುವುದರ ಕಡೆಗೆ ಗಮನ ಕೊಡಬೇಕು.

ಈ ಸಬ್ಜೆಕ್ಟ್ ಮೇಲೆ ಮಾತನಾಡಬೇಕೆಂದು ಕೇಂದ್ರ ಸರ್ಕಾರದವರು ಒಂದು ಸಮ್ಮೇಳನವನ್ನು ಕರೆದಿದ್ದಾರೆ ಅದರಲ್ಲಿ ಮೇಲೆ ಹೇಳಿದ ವಿಚಾರವನ್ನು ಚರ್ಚೆ ಮಾಡಬೇಕೆಂದು ಕೇಂದ್ರ ಸರಕಾರದವರು ಮತ್ತು ರಾಜ್ಯ ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಮತ್ತು ಗ್ರಾಮಾಂತರ ಪ್ರದೇಶಗಳ ಬಹು ಸಂಖ್ಯೆ ಹರಿಜನ ಗಿರಿಜನ ಮತ್ತು ಹಿಂದುಳಿದಿರತಕ್ಕ 60ರಿಂದ 80ಭಾಗ ಜನ ವಾಸ ಮಾಡುತ್ತಾರೆ ಅವರ ಆರ್ಥಿಕ ಮತ್ತು ಇನ್ನಿತರ ಪ್ರಗತಿಯು ಹೇಗೆ ಸಾಧಿಸಬೇಕೆಂದು ಯೋಚನೆ ಮಾಡುತ್ತಿದೆ ಜನತೆಯಲ್ಲಿ ರಾಜಕೀಯ ಸಾಮಾಜಿಕವಾಗಿ ಅವರ ಹಕ್ಕುಭಾಧ್ಯತೆಗಳ ಮತ್ತು ಅವರ ಸೌಲಭ್ಯಗಳನ್ನು ದೊರಕಿಸಿಕೊಳ್ಳುವುದರಲ್ಲಿ ಜನತೆಯಲ್ಲಿ ಜಾಗೃತಿ ಮತ್ತು ಅರಿವು ಇದೆ. ಅವನ್ನು ಶಾಸಕರು ಮತ್ತು ಜನರು ಹಿಂದೆ ಕೆಲವಾರು ವರ್ಷಗಳ ಹಿಂದೆ ಇರಲಿಲ್ಲ. 1962ರಿಂದ 78ರ ವರೆಗೆ ನಾನು ಕೂಡ ಸಚಿವನಾಗಿದ್ದೆ. ಆಗ ಯಾವ ಹರಿಜನ ಗಿರಿಜನ ಸದಸ್ಯರು ಕೂಡ ಅವರ ಏಳಿಗೆಯ ಬಗ್ಗೆ ಅಷ್ಟು ಮಾತನಾಡುತ್ತಿರಲಿಲ್ಲ. ಆಗ ಹಿಂದುಳಿದವರ ಬಗ್ಗೆ ರಾಜ್ಯಾಂಗದತ್ತವಾದ ಏನು ಹಕ್ಕುಭಾದ್ಯತೆಗಳನ್ನು ದೊರಕಿಸಿಕೊಳ್ಳುವುದರಲ್ಲಿ ವಿಶೇಷವಾದ ಆಸಕ್ತಿ ತೋರಿರಲಿಲ್ಲ. ಯಾವ ಪಕ್ಷಕ್ಕೆ ಸೇರಿರಲಿ ಅವರಿಗೆ ಈ ಒಂದು ಅರಿವು ಇರಲಿಲ್ಲ, ಆದರೆ ಅದೇ ಇವತ್ತಿನ ದಿವಸ ಯಾವ ಪಕ್ಷಕ ಸದಸ್ಯರೇ ಆಗಿರಲಿ ಆ ಅರಿವು ಇವತ್ತಿನ ದಿವಸ ಪ್ರತಿಯೊಬ್ಬ ಸದಸ್ಯರಲ್ಲೂ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಮಾತನಾಡಬೇಡಿ ಎಂದು ಹೇಳುವ ಕಾಲ ಮತ್ತು ಪರಿಸ್ಥಿತಿ ಇತ್ತು ಅಲ್ಲವೇ ?

ಶ್ರೀ ಎನ್. ರಾಚಯ್ಯ.—ಈಗ ಪರಿಸ್ಥಿತಿ ಏನಾಗಿದೆ ಎಂದರೆ ಯಾವ ಪಕ್ಷದ ಸದಸ್ಯರೇ ಇರಲಿ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಎಲ್ಲಾ ಪಕ್ಷದವರು ಆಸಕ್ತಿ ಹೊಂದಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಆಗ ಮಂತ್ರಿಗಳಾಗಿದ್ದಿರಿ ತಮಗೆ ಅಧಿಕಾರ ಇತ್ತು ತಾವು ಏನು ಮಾಡಿದಿರಿ ?

ಶ್ರೀ ಎನ್. ರಾಚಯ್ಯ.—ಎಷ್ಟೋ ಹರಿಜನ ಗಿರಿಜನ ಹಾಸ್ಟೆಲ್ಸ್ ಮಾಡಿದ್ದೇನೆ. ಅದಕ್ಕೆ ಕಟ್ಟಡಗಳನ್ನು ಕಟ್ಟಿಸಿದ್ದೇನೆ, ಸೋಸಿಯಲ ವೆಲ್‌ಫೇರ್ ಸೆಂಟರ್ಸ್‌ಗಳನ್ನು ಮಾಡಿದ್ದೇನೆ ಕಮ್ಯೂನಿಟಿ ಸೆಂಟರುಸ್‌ಗಳನ್ನು ಮಾಡಿದ್ದೇನೆ ಚಿಲ್ಡ್ರನ್ ವೆಲ್‌ಫೇರ್ ಸೆಂಟರ್‌ಗಳನ್ನು ಮಾಡಿದ್ದೇನೆ ಯಾವ ಡೆವಲಪ್‌ಮೆಂಟ್ ಆಗಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟುಮೆಂಟು ಮುಖಾಂತರ ಅನೇಕ ಕೆಲಸಗಳನ್ನು ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಹರಿಜನ ಮತ್ತು ಗಿರಿಜನರಿಗೆ ಎಷ್ಟು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದೀರಿ? ಅವರ ಅಭಿವೃದ್ಧಿಗೆ ನೀವು ಎಷ್ಟು ಗಮನ ಕೊಡಬೇಕಾಗಿದೆ ಎಂದರೆ ಅವರು ಹರಕಲು ಮನೆಗಳಲ್ಲಿ ಇದ್ದಾರೆ. ಅವರ ಬಗ್ಗೆ ಶಾಸಕರು ಮತ್ತು ಎಲ್ಲಾ ಸಂಬಂಧಪಟ್ಟವರು ಇವತ್ತಿನ ದಿವಸ ಮನೆಗಳನ್ನು ಕಟ್ಟಿಸಿಕೊಡುವುದೊಂದೆ ಅಲ್ಲ ಅವರ ಆಶೋತ್ತರಗಳನ್ನು ಈಡೇರಿಸಿದ್ದೀರಿ ?

ಶ್ರೀ ಎನ್. ರಾಚಯ್ಯ :—ಬರೀ ಮನೆಗಳನ್ನು ಕಟ್ಟಿಸಿಕೊಟ್ಟರೆ ಸಾಲದು ಅವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಆ ಮುಖಾಂತರ ಅವರ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕು. ಹಿಂದೆ ನಾನು ಸಚಿವನಾಗಿದ್ದೆ, ಮನೆಗಳನ್ನು ಕಟ್ಟುವುದಕ್ಕೋಸ್ಕರ 1,500 ರೂಪಾಯಿ ಇದ್ದುದನ್ನು 3 ಸಾವಿರ ರೂಪಾಯಿಗಳ ವರೆಗೆ ಕೊಡಬೇಕೆಂದು ಮಾಡಿದೆ. 3 ನೂರು 4 ನೂರು ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಟ್ಟರೆ ಆ ಶ್ರಮಜೀವಿಗಳಿಗೆ ಅದರಿಂದ ಏನೂ ಅನುಕೂಲವಾಗುವುದಿಲ್ಲ. ಅವರಿಗೆ ನಾನಾ ತರದ ವಿಶೇಷ ಅವಕಾಶ ಮತ್ತು ರಕ್ಷಣೆ ಕೊಡಬೇಕು. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸೌಲಭ್ಯ ಒದಗಿಸೋಣ. ಜೊತೆಗೆ ಹಿಂದೆ ಸೊಸೈಟಿಗಳ ಮೂಲಕ 3-4 ಸಾವಿರ ರೂಪಾಯಿಗಳನ್ನು ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಟ್ಟಿದ್ದೇವೆ. ಸುಮಾರು ನಾಲ್ಕೂವರೆ ಕೋಟಿ ರೂಪಾಯಿ

ಗಳ ಖರ್ಚಿನಲ್ಲಿ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ. ಈ ಮಧ್ಯೆ ಹಣ ವಸೂಲಿ ಆಗದೆ ಆ ಸೊಸೈಟಿಗಳನ್ನು ಡಿಫಾಲ್ಟ್ ಸೊಸೈಟಿಗಳೆಂದು ಡಿಕ್ಲೇರ್ ಮಾಡಿ ಅಲ್ಲಿ ಸ್ವಲ್ಪ ತೊಂದರೆಯಾಗಿದೆ. ಸರ್ಕಾರ ಏನು ಮಾಡಿದೆ ಎಂದು ಹೇಳಿದರೆ ಸುಮಾರು 34 ಸಾವಿರ ಮನೆಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಅರ್ಧಭಾಗ ನಿವೇಶನ ಗಳನ್ನು ಮತ್ತು ಮನೆಗಳನ್ನು ಹಂಚಿದೆ. ಅಷ್ಟು ಅನ್ಯಾಯವಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕಳೆದ ಎರಡು - ಮೂರು ವರ್ಷಗಳಿಂದ ಏನು ಅಭಿವೃದ್ಧಿಯಾಗಿದೆ ಅದರ ಬಗ್ಗೆ ಶ್ರೀಮಾನ್ ಹನುಮೇಗೌಡರು, ಶ್ರೀಮಾನ್ ಪುಟ್ಟಸ್ವಾಮಯ್ಯನವರು ಏನು ಹೇಳಿದಿರಿ ಅದು ಕೇವಲ ಹಿಂದಿನ ಮೂರು ವರ್ಷಗಳಲ್ಲಿ ಆಗಿಲ್ಲವೆಂದು ಹೇಳಿದರೆ ನಾನು ಒಪ್ಪುತ್ತೇನೆ. ಅದರಲ್ಲಿ ಭಿನ್ನಾಬಿ ಪ್ರಾಯವಿಲ್ಲ. ಕಳೆದ ಎರಡು ಮೂರು ವರ್ಷಗಳಿಂದ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ ಎಂದು ಮಾತ್ರ ಹೇಳುತ್ತೇನೆ. ಸುಮಾರು ನಮ್ಮ ರಾಜ್ಯದಲ್ಲಿ ಮನೆಗಳನ್ನು ಹಂಚಿರುವುದರಲ್ಲಿ 34 ಸಾವಿರ ಮನೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ 12-13 ಸಾವಿರ ಮನೆಗಳು ದೊರಕಿರಬಹುದು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ :—ಇದು ಕೇವಲ 15 ಸಾವಿರವೆಂದು ಇಟ್ಟುಕೊಳ್ಳೋಣ. ಆದರೆ ಅದೇ ತಮಿಳುನಾಡಿನಲ್ಲಿ ಹರಿಜನ ಹೌಸಿಂಗ್ ಕಾರ್ಪೊರೇಷನ್ ವಿಭಾಗದಲ್ಲಿ 1974-75ರಲ್ಲಿ ಕೇವಲ 9 ತಿಂಗಳಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. Let us take the figure as 15,000 houses. In Tamil Nadu within 9 months one lakh houses have been constructed and again they have got a plan to put up another one lakh houses within a short span of time.

ಅಧ್ಯಕ್ಷರು :—ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಇದೇ ವಿಷಯದ ಬಗ್ಗೆ ಹೇಳಿದ್ದಾರೆ. ಇದು ಅವರವರ ಬುಡ್ಜೆಟ್ ಕಾಸಿನ ಪರಿಸ್ಥಿತಿಗೆ ಅನ್ವಯಿಸುತ್ತದೆ. ನಮಗೂ ಅವರಿಗೂ ಬಹಳ ವ್ಯತ್ಯಾಸ ಇದೆಯೆಂದು ಹೇಳಿದ್ದಾರೆ?

ಶ್ರೀ ಎನ್. ರಾಚಯ್ಯ :—ನಾವು ಸಹಕಾರಸಂಘಗಳ ಮುಖಾಂತರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ ಮತ್ತು ಗ್ರಾಂಟ್ ಕೊಟ್ಟು ಅನೇಕ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಈ ಎಲ್ಲವನ್ನೂ ಸೇರಿಸಿದರೆ ಸುಮಾರು 50 ಸಾವಿರ ಮನೆಗಳನ್ನು ಕನಿಷ್ಠಪಕ್ಷ ಕೊಟ್ಟಿದ್ದೇವೆ, ಹೊಸದಾಗಿ ಲಕ್ಷಾಂತರ ರೂಪಾಯಿಗಳ ಖರ್ಚಿನಲ್ಲಿ ಮನೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಇನ್ನು ಸಾಲದ ರೂಪದಲ್ಲಿ ಕೊಡುವ ಕಾರ್ಯಕ್ರಮಗಳನ್ನು

(ಶ್ರೀ ಎನ್. ರಾಚಯ್ಯ)

ಹಾಕಿಕೊಂಡು ಬಂದಿದ್ದೇವೆ. ಶ್ರೀಮಾನ್ ಬಂಗಾರಪ್ಪನವರಿಗೆ ಬೇಕಾದರೆ ಅಂಕಿ ಅಂಶಗಳನ್ನು ತರಿಸಿಕೊಡುತ್ತೇನೆ. ನಿರ್ಗತಿಕರಾದವರಿಗೆ ಮತ್ತು ಬಡವರಿಗೆ ನಿವೇಶನಗಳನ್ನು ಹಂಚುವ ತೀರ್ಮಾನವೇ ಸರ್ಕಾರದ ಚಿಂತನೆಯಲ್ಲಿ ಇದೆಯೆಂದು ಹೇಳಲು ಇಷ್ಟಪಡುತ್ತೇನೆ. ಶ್ರೀಮಾನ್ ಹನುಮೇಗೌಡರು ಯಾವ ವಿಧವಾದಂತಹ ಅನುಕೂಲ ಮಾಡಿಲ್ಲ ಎಂದು ಯಾವತರದ ಸಹಾಯವನ್ನು ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಹಿಂದಿನ ಸರ್ಕಾರ ಮಾಡದೆ ಇರುವುದು ಅದು ನಮ್ಮ ಜವಾಬ್ದಾರಿಯಲ್ಲ. ಯಾವ ಜನಾಂಗವೇ ಆಗಲಿ ಯಾವ ಜಿಲ್ಲೆಯೇ ಆಗಲಿ ನಿರ್ಗತಿಕರಾದವರಿಗೆ ಹಿಂದುಳಿದವರಿಗೆ ರಕ್ಷಣೆ ಕೊಡತಕ್ಕಂಥ ಪಾಲಿಸಿ ನಮ್ಮ ಸರ್ಕಾರದಲ್ಲ ಇಟ್ಟಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ನಿರ್ಗತಿಕರಿದ್ದಾರೆ ಅವರ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡುವುದೇ ನಮ್ಮ ಸರ್ಕಾರದ ಉದ್ದೇಶ ವೆಂದು ಹೇಳಲಪೇಕ್ಷಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ :—ಮಾನ್ಯ ದೇವೇಗೌಡರು ಕಮ್ಯೂನಲ್ ಸೆನ್ಸಸ್ ಆಗಬೇಕು ಎಂದು ಹೇಳಿದ್ದಾರೆ. ನಿಮ್ಮ ಇಂದಿರಾಗಾಂಧಿಯವರಂಥ ಸ್ಟೇಟಿನಲ್ಲಿ ಹರಿಜನ ಗಿರಿಜನರ ಉದ್ಧಾರ ಎಷ್ಟರಮಟ್ಟಿಗೆ ಆಗಿದೆಯೆಂದು ಸರ್ಕಾರಕ್ಕೆ ಮಾಹಿತಿಕೊಟ್ಟು ಹೇಳಿದ್ದಾರೆ ನೀವು ಮಾತನಾಡುವಾಗ ನಮ್ಮ ಕಡೆಗೆ ಕೈತೋರಿಸಿ ಮಾತನಾಡಬೇಡಿ?

ಶ್ರೀ ಎನ್. ರಾಚಯ್ಯ.—ನಾನು ಹೇಳುವುದನ್ನು ಮಾನ್ಯ ಸದಸ್ಯರು ಕೇಳುತ್ತಾ ಇಲ್ಲ. ಹಿಂದಿನ ಸರ್ಕಾರ ಅನೇಕ ರಾಜ್ಯಾಂಗದತ್ತವಾಗಿ ಏನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲವೆಂದು ಹೇಳುತ್ತೇನೆ.

5-00 P. M.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದಿನ ಸರ್ಕಾರದಲ್ಲಿ ತಾವು ಇರಲಿಲ್ಲವೇ? ಹಿಂದೆ ತಾವು ಇದ್ದಾಗ ಇಂಪ್ಲಿಮೆಂಟ್ ಮಾಡುವುದಕ್ಕೆ ಏನು ತೊಡಕುಗಳು ಬಂದಿತ್ತು? ಈಗ ಇಂಪ್ಲಿಮೆಂಟ್ ಮಾಡುವುದಕ್ಕೆ ಏನು ಅನುಕೂಲಗಳು ಆಗಿವೆ?

ಶ್ರೀ ಎನ್. ರಾಚಯ್ಯ.—ಮಾನ್ಯ ಕೃಷ್ಣನ್‌ರವರು ಹೇಳುವುದಕ್ಕೆ ಮೊದಲೇ ನಾನು ಹೇಳಿದೆ ನನ್ನ ಕಾಲದಲ್ಲಿ ಏನೇನು ಮಾಡಬೇಕೋ ಅಷ್ಟನ್ನೂ ಮಾಡಿದೆ. 1962 ನೇ ಇಸ್ವಿಯಿಂದ 1973 ನೇ ಇಸ್ವಿಯವರೆಗೆ ಏನು ಮಾಡಬೇಕಾಗಿತ್ತೋ

ಅಷ್ಟನ್ನು ಆಗ ಇದ್ದಂಥ ಸರ್ಕಾರ ಮಾಡಲಿಲ್ಲ ಎನ್ನುವುದನ್ನು ನಾನು ಹೇಳುತ್ತಿರುವುದು. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹೋದ ಒಂದೇ ವರ್ಷ ನಾವು 80 ಕಮ್ಯೂನಿಟಿ ಸೆಂಟರ್‌ಗಳನ್ನು ಓಪನ್ ಮಾಡುವುದಕ್ಕೆ ಮಂಜೂರು ಮಾಡಿದ್ದೇವೆ. ಈ ವರ್ಷ 100 ಕಮ್ಯೂನಿಟಿ ಸೆಂಟರ್‌ಗಳನ್ನು ಓಪನ್ ಮಾಡುವುದಕ್ಕೆ ಮಂಜೂರು ಮಾಡಿದ್ದೇವೆ. ಹಿಂದಿನ ಸರ್ಕಾರ ಎಂದಾಗ ಮಾನ್ಯ ಹನುಮೇಗೌಡರವರು ಆಕ್ಷೇಪಣೆ ಮಾಡುತ್ತಾರೆ, ಹಿಂದೆ 11 ವರ್ಷಗಳ ಕಾಲ ಇದ್ದಂಥ ಆ ಸರ್ಕಾರದವರು ಮಾಡದೇ ಇರತಕ್ಕಂಥ ಕೆಲಸಗಳನ್ನು ಅಂದರೆ 180 ಕಮ್ಯೂನಿಟಿ ಸೆಂಟರ್‌ಗಳನ್ನು ನಾವು ತೆಗೆದಿದ್ದೇವೆ. ಮತ್ತೊಂದು ನಿದರ್ಶನವನ್ನು ತಮಗೆ ಕೊಡುವುದಾದರೆ ಶಿಶುವಿಹಾರಗಳ 380 ಆಗಿವೆ. ಮತ್ತೆ 118 ಶಿಶುವಿಹಾರಗಳನ್ನು ಮಂಜೂರು ಮಾಡಿ ಎಂದು ಈಗಾಗಲೇ ಆಜ್ಞೆಹೊರಡಿಸಿದ್ದೇವೆ. ಮತ್ತೆ ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ವಿದ್ಯಾ ಇಲಾಖೆಯ ಪರವಾಗಿ ಒಂದು ಸಾವಿರ ಶಿಶುವಿಹಾರಗಳನ್ನು ಮಾಡಬೇಕೆಂದು ಉದ್ದೇಶ ಪಟ್ಟಿದ್ದಾರೆಂದು ಮೊನ್ನೆ ತಾನೇ ಅವರ ಉತ್ತರದಲ್ಲಿ ಹೇಳಿದ್ದಾರೆ, ಆ ರೀತಿ ಅವರು ಘೋಷಣೆ ಮಾಡಿದ್ದಾರೆ. ನಾವು ಸಾವಿರಗಟ್ಟಲೇ ಶಿಶುವಿಹಾರಗಳನ್ನು ಮಾನ್ಯ ದೇವರಾಜ ಅರಸ್‌ರವರ ಸರ್ಕಾರ ಮಾಡುತ್ತಿರುವಾಗ, 11 ವರ್ಷಗಳ ಕಾಲ ಹಿಂದೆ ಯಾವ ಒಂದು ಸರ್ಕಾರ ಇತ್ತೋ ಅವರು 100 ಶಿಶುವಿಹಾರಗಳನ್ನು ಮಾಡಲಿಲ್ಲವೆಂದು ವಾದವಿದೆ. ಬೇರೆ ರಾಜ್ಯಗಳಲ್ಲಿ, ಎಲ್ಲೆಲ್ಲೋ ಮಾಡಿದ್ದಾರೆ ಇಲ್ಲಿ ಮಾಡಿಲ್ಲ ಎನ್ನತಕ್ಕಂಥ ಪ್ರಶ್ನೆಯಲ್ಲ. ನಮ್ಮ ಒಂದು ಕಾಲದಲ್ಲಿ, ಒಂದು ಪೀರಿಯಡ್‌ನಲ್ಲಿ ಎಷ್ಟೆಷ್ಟು ಆಗಿದೆ ಎನ್ನುವುದನ್ನು ಅಂಕಿ ಅಂಶಗಳ ಪ್ರಕಾರ ಹೇಳುವುದಾದರೆ, 11 ವರ್ಷಗಳಲ್ಲಿ ಆಗದೇ ಇರತಕ್ಕಂಥದ್ದರ ಎರಡರಷ್ಟು ನಾವು ಮಾಡಿದ್ದೇವೆ. ಅದಕ್ಕೆ ಬೇಕಾದರೆ ಅಂಕಿಅಂಶಗಳನ್ನು ತಮ್ಮ ಮುಂದೆ, ಈ ಸಭೆಯ ಮುಂದೆ ಇಡಬಲ್ಲೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮುಕ್ಕಾಲು ಭಾಗ ಜನರೆಲ್ಲಾ ಅತ್ತ ಕಡೆಯೇ ಇದ್ದೀರಿ ಆಗ ಆಗಿದ್ದಂಥ ಮಂತ್ರಿಗಳೆಲ್ಲಾ ಅತ್ತಕಡೆಯೇ ಇದ್ದಿರಿ.

ಶ್ರೀ ಎನ್. ರಾಚಯ್ಯ.—ನಾನು ಡೆವಲಪ್‌ಮೆಂಟ್ ಮಂತ್ರಿಯಾದರೆ ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಳ್ಳದೇ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸೆಂಟ್ರಲ್ ಗೌವರ್ನಮೆಂಟಿನವರಿಂದ ಅಪ್ಪಣೆ ಪಡೆಯಬೇಕಾಗುತ್ತದೆ. ಜೊತೆಗೆ ಹಣಕಾಸಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನೀವು ಡೆಮೊಕ್ರಟಿಕ್ ಸೆಟ್‌ಅಪ್‌ನ್ನು ಅರ್ಥ ಮಾಡಿಕೊಂಡು ತಿಳಿದುಕೊಂಡಿದ್ದರೆ ನೀವು ಈ ರೀತಿ ಪ್ರಶ್ನೆಯನ್ನು ಹಾಕತಕ್ಕಂಥದ್ದು

(ಶ್ರೀ ಎನ್. ರಾಚಯ್ಯ)

ಅನಾವಶ್ಯಕ. ನೀವು ಆಗ ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿಬಿಟ್ಟಿದ್ದರೆ, ಆ ಒಂದು ಪೀರಿಯಡ್‌ನಲ್ಲಿ ಭಾರತ ದೇಶದಲ್ಲಿ ಯಾರೂ ಮಾಡದೇ ಇರತಕ್ಕಂಥ ರೀತಿಯಲ್ಲಿ ನಾನು ಮಾಡಿ ಬಿಡುತ್ತಿದ್ದೆ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ರಾಚಯ್ಯನವರು, ಕರ್ನಾಟಕ ರಾಜ್ಯದಲ್ಲಿ ಹರಿಜನ ಗಿರಿಜನರ ಕಲ್ಯಾಣ ಅಭಿವೃದ್ಧಿ ಸಮಿತಿ ಎಂದು, ಈ ಶಾಸನ ಸಭೆಯ ಸಮಿತಿಯಲ್ಲಿ ಅಧ್ಯಕ್ಷರಾಗಿದ್ದರು. ಆಗ ಮಾನ್ಯ ವೀರೇಂದ್ರ ಪಾಟೀಲ್ ರವರು ಕರ್ನಾಟಕದಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ, ಮೈಸೂರು ರಾಜ್ಯದಲ್ಲಿ ಮೊದಲನೆಯದಾಗಿ ಹರಿಜನ ಗಿರಿಜನರ ಅಭಿವೃದ್ಧಿ ಕಲ್ಯಾಣ ಸಮಿತಿಯನ್ನು ಶಾಸನ ಸಭೆಯ ಮಟ್ಟದಲ್ಲಿ ಮಾಡಿ ಹೆಸರು ಪಡೆದಿದ್ದಾರೆಂದು ತಾವು ಅನೇಕ ಸಾರಿ ಅದರ ಅಧ್ಯಕ್ಷರಾಗಿದ್ದಾಗ ಅವರ ಬಗ್ಗೆ ಒಳ್ಳೆಯ ಮಾತನ್ನು ಹೇಳಿದ್ದು ಸತ್ಯವೋ ಇಲ್ಲವೋ ?

ಶ್ರೀ ಎನ್. ರಾಚಯ್ಯ —ನಾವು ಒಳ್ಳೆಯದು ಮಾಡಿದ್ದನ್ನು ನೀವು ಒಳ್ಳೆ ಯದು ಮಾಡಿದ್ದಾರೆಂದು ಹೇಳಬೇಕು, ಬರೀ ಕೆಟ್ಟದು ಮಾಡಿದ್ದಾರೆಂದು ನೀವು ಈಗ ಹೇಳುವುದಾದರೆ, ನಾವು ಸಹ ಹಿಂದಿನವರು ಏನು ಕೆಟ್ಟದ್ದನ್ನು ಮಾಡಿದ್ದಾರೆ ಅದನ್ನೇ ನಾವು ಹೇಳಬೇಕಾಗುತ್ತದೆ. ನೀವು ಸಹ ನಾವು ಒಳ್ಳೆಯದನ್ನು ಮಾಡಿರುವುದನ್ನು ಹೇಳಿದರೆ ನಾವು ಸಹ ಹಿಂದೆ ಏನು ಒಳ್ಳೆಯದು ಮಾಡಿದ್ದಾರೆ ಅದನ್ನು ಒಂದೊಂದಾಗಿ ಹೇಳಿಕೊಂಡು ಹೋಗುತ್ತೇವೆ.

ಶ್ರೀ ಕೆ ಹೆಚ್. ಹನುಮೇಗೌಡ.—ನಿಮಗೆ ಮಂತ್ರಿ ಪದವಿ ಬರದಿದ್ದರೆ ಇದನ್ನು ನಿಮ್ಮ ಬಾಯಿಂದಲೇ ಕೇಳುತ್ತಿದ್ದೆವು.

ಶ್ರೀ ಕೆ. ಪುಟ್ಟಸ್ವಾಮಿ —ನಾನು ಅನೇಕ ಸಾರಿ ಅವರನ್ನು ಮಂತ್ರಿಯಾಗು ತ್ತೀರಿ ಎಂದು ಹಾರೈಸಿದ್ದರಿಂದ ಅವರು ಮಂತ್ರಿಗಳಾಗಿದ್ದಾರೆ. ಮುಖ್ಯಮಂತ್ರಿ ಯಾಗುತ್ತೀರಿ ಎಂದು ಹಾರೈಸುವುದನ್ನು ತಡೆಹಿಡಿದಿದ್ದೇನೆ.

ಶ್ರೀ ಎನ್. ರಾಚಯ್ಯ.—ಬಹಳ ಸಂತೋಷ, ತಾವು ಆಶೀರ್ವಾದವನ್ನು ಮಾಡಿದ್ದೀರಿ. ಇನ್ನು ಈ ಪ್ರಾಥಮಿಕ ಶಾಲೆಗಳ ಅಭಿವೃದ್ಧಿಗೋಸ್ಕರ ಟಿ. ಡಿ. ಬಿ. ಮೂಲಕ ಹಣವನ್ನು ಕೊಡುತ್ತಿದ್ದೇವೆ. ನಿಜವಾಗಿಯೂ ವಿದ್ಯಾ ಇಲಾಖೆಯವರು ಈ ವಿಷಯದಲ್ಲಿ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡು, ಹಣವನ್ನು, ಸಹಾಯ ವನ್ನು ಒದಗಿಸಬೇಕೆಂದು ನಿಯಮವಿರತಕ್ಕಂಥದ್ದು, ಇದು ಅವರಿಗೆ ಸಂಬಂಧ

ಪಟ್ಟಿದ್ದು, ಅದು ನಮ್ಮ ಹೊಣೆಯಲ್ಲ. ಇವತ್ತು ಅನೇಕ ಪಂಚಾಯತಿಗಳಲ್ಲಿ ಹಣವಿಲ್ಲ ಮತ್ತು ತಾಲ್ಲೂಕ್ ಬೋರ್ಡ್‌ಗಳಲ್ಲಿ ಸಾಕಷ್ಟು ಹಣವಿಲ್ಲ ಎನ್ನತಕ್ಕಂಥದ್ದು ನೀವು ಹೇಳಿದ್ದೀರಿ ಅದನ್ನು ನಾನು ಒಪ್ಪಿಕೊಂಡಿದ್ದೇನೆ ಅದನ್ನು ನಾನು ಅನೇಕ ಸಂದರ್ಭದಲ್ಲಿ ಈ ಸದನದಲ್ಲೂ ಹೇಳಿದ್ದೇನೆ, ಹೊರಗಡೆಯೂ ಕೂಡ ಹೇಳಿದ್ದೇನೆ. ನಿಮ್ಮ ಅಭಿಪ್ರಾಯಕ್ಕೂ ನಮ್ಮ ಅಭಿಪ್ರಾಯಕ್ಕೂ ಏನೂ ವ್ಯತ್ಯಾಸವಿಲ್ಲ. ಇವತ್ತು 26 ಸಾವಿರಕ್ಕಿಂತಲೂ ಹೆಚ್ಚಾಗಿರತಕ್ಕಂಥ ಹಳ್ಳಿಗಳಲ್ಲಿ ಸುಮಾರು 8 ಸಾವಿರದ 250 ಗ್ರಾಮ ಪಂಚಾಯಿತಿಗಳನ್ನು ಮೊದಲು ಸಾಕಷ್ಟು ಉತ್ಪಾದನೆ ಮಾಡಲು, ಪ್ರಗತಿದಾಯಕವಾದ ಯೋಜನೆ ಮಾಡಿ ಹೆಚ್ಚಿಗೆ ಹಣವನ್ನು ಖರ್ಚು ಮಾಡುವುದಕ್ಕೂ ಅವಕಾಶವಿದ್ದಾಗ್ಯೂ ಸಹ ಹಣವಿಲ್ಲ—ಇದನ್ನು ನಾನು ಒಪ್ಪುತ್ತೇನೆ. ಆದಕ್ಕೋಸ್ಕರ ಗ್ರಾಮ ಪಂಚಾಯತಿಗಳನ್ನು ಕ್ರಾಂತಿಕಾರಕವಾಗಿ ನಾವು ಪುನರ್ ವ್ಯವಸ್ಥೆ ಮಾಡಬೇಕು ಎನ್ನತಕ್ಕಂಥದ್ದು ನನ್ನ ಮನಸ್ಸಿನಲ್ಲಿರತಕ್ಕಂಥ ಒಂದು ಇಚ್ಛೆ. ಅದಕ್ಕೋಸ್ಕರ ಪಕ್ಷ ಪಂಗಡ ಭೇದವಿಲ್ಲದೆ 40—50 ಜನ ಸದಸ್ಯರೆಲ್ಲಾ ಸೇರಿ ಅಲ್ಲಿಗೆ ಹೋಗೋಣ, ಅಲ್ಲಿಗೆ ಹೋಗಿ ಅಲ್ಲಿಯ ರೈತರ ಅಭಿಪ್ರಾಯವನ್ನು ಪಡೆದು ಗ್ರಾಮಾಂತರ ಪ್ರದೇಶಗಳಿಗೆ ಒಂದು ಮಾದರಿ ಕಾನೂನನ್ನು ತರಬೇಕು ಎನ್ನತಕ್ಕಂಥದ್ದು ನನ್ನ ಮನಸ್ಸಿನಲ್ಲಿದೆ. ತಾವು ಇದಕ್ಕೆ ಒಪ್ಪಿಕೊಂಡರೆ ಮುಂದಿನ ಸೆಷನ್ ಮುಗಿಯುವುದರೊಳಗಾಗಿ ಎಲ್ಲಾ ಶಾಸಕರುಗಳನ್ನೂ ಕೂಡ ನಾನು ಆಹ್ವಾನಿಸಿ, ಒಂದೆರಡು ದಿವಸ ಈ ವಿಷಯದ ಬಗ್ಗೆ ಚರ್ಚೆ ಮಾಡಿ, ಇದರಲ್ಲಿ ಯಾವ ಪಕ್ಷ ಪಂಗಡ, ಭೇದವಿಲ್ಲದೆ ಎಲ್ಲರ ಅಭಿಪ್ರಾಯವನ್ನೂ ಪಡೆಯಬೇಕು ಎನ್ನುವ ಉದ್ದೇಶವಿದೆ. ಆದರೆ ಇದಕ್ಕೆ ಹಣಕಾಸನ್ನು ಒದಗಿಸುವ ದೃಷ್ಟಿಯಿಂದ ಮೊದಲು ಒಂದು ಆರ್ಡಿನೆನ್ಸನ್ನು ಹೊರಡಿಸಿ ಆ ಮೇಲೆ ಕಾನೂನು ಮಾಡಬೇಕೆಂದಿದ್ದೇನೆ. ಸ್ಥಳೀಯ ಸಂಸ್ಥೆಗಳು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು, ಟೌನ್ ಮುನಿಸಿಪಾಲಿಟಿಗಳು, ತಾಲ್ಲೂಕ್ ಬೋರ್ಡ್‌ಗಳಿಗೆ ಹಣಕಾಸಿನ ನೆರವನ್ನು ಒದಗಿಸಲು ಒಂದು ಪ್ರತ್ಯೇಕವಾದ ಕಾರ್ಪೊರೇಷನ್ ಮಾಡಿ ಆ ಕಾರ್ಪೊರೇಷನ್ ಮೂಲಕ ಯಾವ ಅಡ್ಡಿ ಆತಂಕವಿಲ್ಲದೆ ಕೊಡಬೇಕು ಎಂದು ನನ್ನ ಉದ್ದೇಶವಿದೆ.

ಶ್ರೀ ಕೆ. ಹೆಚ್ ಹನುಮೇಗೌಡ.— ಸ್ವಾಮಿ, ಈ ಕಾರ್ಪೊರೇಷನ್ ಮಾಡಿದ ಮೇಲೆ ಅವರು ಸಾಲವನ್ನು ತೆಗೆದುಕೊಂಡ ಮೇಲೆ ವಾಪಸ್ಸು ಕೊಡುವುದಿಲ್ಲವೆಂದು ಹೇಳುತ್ತೀರಿ. ಅದಕ್ಕೋಸ್ಕರವೇ, 450 ಕೋಟಿ ರೂಪಾಯಿಗಳಲ್ಲಿ, ಸ್ವಲ ಹೆಚ್ಚು ಕಡಿಮೆ 350 ಕೋಟಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನರಿಂದಲೇ ಬರತಕ್ಕಂಥದ್ದು, ಆದುದರಿಂದ ಈ ಹಣದಲ್ಲಿ ಸ್ವಲ್ಪ ಭಾಗವನ್ನು ಅವರಿಗೆ ಅಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳಿಗಾಗಿ ಏತಕ್ಕೆ ಖರ್ಚು ಮಾಡಬಾರದು ಸ್ವಾಮಿ ?

ಅಧ್ಯಕ್ಷರು.—ಇದು ಏನು ಕಡಲೇ ಪುರಿ ವ್ಯಾಪಾರವೇನ್ರಿ ?

ಶ್ರೀ ಎನ್. ರಾಚಯ್ಯ.—ಎಷ್ಟೋ ಅನೇಕ ವಿಷಯಗಳಲ್ಲಿ ನನ್ನ ಒಪ್ಪಿಗೆ ಇದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕಾರ್ಪೊರೇಷನ್ ಮೂಲಕ ಬರೀ ಸಾಲ ಕೊಡಬೇಕೆಂದು ಅಲ್ಲ, ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದವರಿಂದ ಏನು ಗ್ರ್ಯಾಂಟ್ಸ್ ಬರುತ್ತದೆಯೋ ಮತ್ತು ಈ ಸಂಸ್ಥೆಗಳಿಂದ ಏನು ಉತ್ಪಾದನೆಯಾಗುತ್ತದೆಯೋ ಅದನ್ನೆಲ್ಲಾ ಉಪಯೋಗಿಸಿಕೊಂಡು ನಾವು ಹೇಳುವ ರೀತಿಯಲ್ಲಿ ಖರ್ಚು ಮಾಡಬೇಕು ಬರೀ ಸಾಲವನ್ನು ಕೊಡುವುದೇ ಒಂದು ಉದ್ದೇಶವಲ್ಲ.

ಇನ್ನು ನೀರು ಸರಬರಾಜು ವಿಚಾರದಲ್ಲಿ ಹೇಳುವುದಾದರೆ, ಒಟ್ಟು ರಾಜ್ಯ ದಲ್ಲಿ ಸುಮಾರು 26 ಸಾವಿರ ಹಳ್ಳಿಗಳಿದ್ದರೆ 26 ಸಾವಿರಕ್ಕಿಂತಲೂ ಹೆಚ್ಚಾಗಿ ನಾವು ಈಗಾಗಲೇ ಕುಡಿಯುವ ನೀರಿನ ಬಾವಿಗಳನ್ನು ತೆಗೆದಿದ್ದೇವೆ. ಆದರೆ ಜನಸಂಖ್ಯೆ ಹೆಚ್ಚಿದ ಹಾಗೆಲ್ಲಾ, ಗ್ರಾಮ್ಯಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳ ಅವಶ್ಯಕತೆ ಹೆಚ್ಚಾಗುತ್ತಾ ಹೋಗುತ್ತದೆ ಆದರೆ ನಿಮಗೆ ಒಂದು ಭರವಸೆಯನ್ನು ಕೊಡುತ್ತೇವೆ, ನಾವು ಈ ಯೋಜನೆಯನ್ನು ಜಾರಿಗೆ ಕೊಡುವುದಕ್ಕೆ, 5 ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗೋಸ್ಕರ ಕೊಟ್ಟಿ ದ್ದೇವೆ ಮತ್ತೆ ರಾಷ್ಟ್ರೀಯ ನೀರು ಸರಬರಾಜುಗೋಸ್ಕರ 2 ಕೋಟಿ ರೂಪಾಯಿ ಗಳನ್ನು, ಓಪನ್ ವೆಲ್ ಗೋಸ್ಕರ 5 ಕೋಟಿ ರೂಪಾಯಿಗಳನ್ನು ಇಡೀ ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಇಷ್ಟು ಹಣವನ್ನು ಕೊಟ್ಟಿಲ್ಲ. ಇವತ್ತು ಅನೇಕ ಜಿಲ್ಲೆಗಳಲ್ಲಿ ಹಣವನ್ನು ಸರಿಯಾಗಿ ಖರ್ಚುಮಾಡದೇ ವಾಪಸ್ಸು ಕಳುಹಿಸಿ ಕೊಟ್ಟಿದ್ದಾರೆ. ಉದಾಹರಣೆಗೆ ಬೆಳಗಾಂ ಡಿವಿಜನ್‌ನಲ್ಲಿ ನಾವು ಒದಗಿಸಿದಂಥ ಹಣವನ್ನು ಅಲ್ಲಿ ಸರಿಯಾಗಿ ಖರ್ಚು ಮಾಡದೆ ಹಣವನ್ನು ವಾಪಸ್ಸು ಕಳುಹಿಸಿ ಕೊಟ್ಟಿದ್ದಾರೆ. ನಾವು ಈ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಎಷ್ಟು ಪ್ರಮಾಣದಲ್ಲಿ ಮಾಡುತ್ತಿದ್ದೇವೆಂದರೆ ಮಾನ್ಯ ಶ್ರೀ ಹನುಮೇಗೌಡರವರು ಇವತ್ತು ಒಪ್ಪುತ್ತಿಲ್ಲ. ಆದರೂ ಅವರು ಸಮಾಧಾನವಾಗುವ ರೀತಿಯಲ್ಲಿ ಮಾಡಿಕೊಡು ತ್ತೇವೆ, ಮತ್ತು ಪ್ರತಿಯೊಂದು ಗ್ರಾಮದಲ್ಲೂ ಕೂಡ ಕುಡಿಯುವ ನೀರಿನ ಆದ್ಯತೆ ಯನ್ನು ಬಗೆಹರಿಸುವುದಕ್ಕೆ ಸಾಕಷ್ಟು ಲಸಗಳನ್ನು ಮಾಡುತ್ತೇವೆಂದು ಸಂಪೂರ್ಣ ಭರವಸೆ ಕೊಡುತ್ತೇನೆ.

ಮಾನ್ಯ ಸದಸ್ಯರುಗಳು ಈ ಒಂದು ಶಾಸನವನ್ನು ಮಾಡಿಕೊಟ್ಟ ಮೇಲೆ ಎಲ್ಲಾ ಸದಸ್ಯರ ಜೊತೆಯಲ್ಲಿ ಸೇರಿಕೊಂಡು ತಮ್ಮ ಒಂದು ಕ್ಷೇತ್ರಕ್ಕೆ ಬರುತ್ತೇನೆ. ಆಗ ಎಲ್ಲೆಲ್ಲಿ ನಾವು ಕೆಲಸ ಮಾಡಬೇಕಾದ ಅವಶ್ಯಕತೆ ಇದೆ, ಮೊದಲು ಹರಿಜನ

ಗಿರಿಜನರ ಕೇರಿಗೆ ಕೊಟ್ಟು ಆನಂತರ ಎಲ್ಲಾ ಹಿಂದುಳಿದವರ ಬಗ್ಗೆಯೂ ಯೋಚನೆ ಮಾಡೋಣ. ಇನ್ನು ನೀರಿನ ವಿಚಾರ.

ಶ್ರೀ ಕೆ ಹೆಚ್. ಹನುಮೇಗೌಡ:—ಹ್ಯಾಂಡ್ ಪಂಪ್ಸ್ ವಿಚಾರವನ್ನು ಹೇಳಿ.

ಶ್ರೀ ಎನ್. ರಾಚಯ್ಯ:—ತಾವು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಾಗಿ ಹಣವನ್ನು ಖರ್ಚು ಮಾಡಿದ್ದೇವೆ. ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ಮೇಲೆ ಮುಂದಿನ ವರ್ಷವೂ ಸಾಕಾದಷ್ಟು ಹಣವನ್ನು ಖರ್ಚು ಮಾಡುವವರಿದ್ದೇವೆ.

ತಾಲ್ಲೂಕು ಬೋರ್ಡುಗಳ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಆರ್ಥಿಕ ಸುಧಾರಣೆಯನ್ನು ಸಾಕಷ್ಟು ಮಟ್ಟಿಗೆ ಮಾಡಿಲ್ಲ ಎನ್ನತಕ್ಕ ದೂರು ಇದೆ. ಈ ವಿಚಾರದಲ್ಲಿ ನಾನು ಹೇಳುತ್ತೇನೆ, ನೀವು ಹೆಮ್ಮೆಪಡಬೇಕಾಗಿದೆ ಸ್ವಲ್ಪ ತಪ್ಪುಗಳು ಇದ್ದರೆ ಅದನ್ನು ದೊಡ್ಡದಾಗಿ ಮಾಡಿ, ಡಿಮ್ಯಾಂಡನ್ನು ಪಾಸ್ ಮಾಡದೆ ನಮ್ಮ ಸರ್ಕಾರವನ್ನು ಟೀಕೆ ಮಾಡುತ್ತೀರಿ. ನಮ್ಮ ಸರ್ಕಾರವನ್ನು ತಾವುಗಳು ಅಭಿನಂದನೆ ಮಾಡಬೇಕು, ಅಂಥದ್ದನ್ನು ನೀವು ಮಾಡುವುದಿಲ್ಲ ಗ್ರಾಮಾಂತರ ಪ್ರದೇಶಗಳಲ್ಲಿ ಲಕ್ಷೋಪಲಕ್ಷ ವ್ಯವಸಾಯದ ಕಾರ್ಮಿಕರು ಇವತ್ತಿನ ದಿವಸ ಭೂಮಾಲೀಕರನ್ನಾಗಿ ಮಾಡಿ ಅವರ ಆರ್ಥಿಕ ಸುಧಾರಣೆಯಾಗುವುದಕ್ಕೆ ಅನುಕೂಲ ಮಾಡಿದ್ದೇವೆ. ಯಾರು ಅವಿದ್ಯಾವಂತರು ಯಾರು ನಿರುದ್ಯೋಗಿಗಳು ಇದ್ದಾರೆ, ಯಾರು ಕೃಷಿಕಾರ್ಮಿಕರು ಇದ್ದಾರೆ, ಅವರುಗಳಿಗೆ ಜಮೀನನ್ನು ವಿತರಣೆ ಮಾಡುವ ಮೂಲಕ ಅಲ್ಲದೆ ಯಾವ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿತ್ತು? ಇದರಿಂದ ಗ್ರಾಮಾಂತರ ಪ್ರದೇಶದ ಜನಗಳಿಗೆ ಮಾತ್ರ ಹೆಚ್ಚು ಲಾಭವಾಗುತ್ತದೆ ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಕ್ರಾಂತಿಕಾರಕವಾದ ಸುಧಾರಣೆಯಾಗುತ್ತದೆ. ಇಂಥ ಭೂಸುಧಾರಣೆಯನ್ನು ನಾವು ಜಾರಿಗೆ ತಂದಿರುವಾಗ ತಾವು ನಮ್ಮನ್ನು ಅಭಿನಂದಿಸಬೇಕು

ಶ್ರೀ ಬಿ. ಪುಟ್ಟಸ್ವಾಮಯ್ಯ:—ಮಾನ್ಯ ಮಂತ್ರಿಗಳು ತಮ್ಮ ರಿಂಗ್‌ನಲ್ಲಿಯೇ ಇರಬೇಕು.

ಶ್ರೀ ಎನ್. ರಾಚಯ್ಯ:—ನನ್ನ ಮೇಲೆ ಆಕ್ಷೇಪಣೆ ಮಾಡಿದ್ದರಿಂದ ಈ ಮಾತನ್ನು ಹೇಳಬೇಕಾಯಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ :— ತಾಳ ಇಲ್ಲ, ಮೇಳ ಇಲ್ಲ, ವೆಚ್ಚ ಇಲ್ಲ, ಅಣ್ಣ ಸಾಫಿ ಕಲ್ಯಾಣ, ಎನ್ನ ಇದಿ ?

ಶ್ರೀ ಎನ್. ರಾಚಯ್ಯ :— ಇನ್ನು ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾದರೆ ಇವತ್ತು ತಾಲ್ಲೂಕು ಬೋರ್ಡುಗಳ ಹಾಗೂ ಪಂಚಾಯಿತಿಗಳ ಕಾಯಿದೆ ಏನು ಇದೆಯೋ ಆ ಕಾಯಿದೆಯನ್ನು ತಾವು ನೋಡಿದರೆ ಎಲ್ಲಾ ಅಧಿಕಾರವನ್ನು ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್ ಅವರಿಗೆ ಕೊಟ್ಟಿದ್ದೇವೆ. ನೂರಕ್ಕೆ 90 ಭಾಗ ಅಧಿಕಾರವನ್ನು ಅವರಿಗೆ ಕೊಟ್ಟಿದ್ದರೂ ಕೂಡ ತಮಗೆ ಒಂದು ನಿದರ್ಶನವನ್ನು ಹೇಳುತ್ತೇನೆ. ಮಾನ್ಯ ಸದಸ್ಯರೊಬ್ಬರು ನಾವು ಅಧಿಕಾರವನ್ನು ಕಿತ್ತುಕೊಂಡಿದ್ದೇವೆನ್ನುವ ಮಾತನ್ನು ಹೇಳಿದರು. ನಾವು ಅವರ ಅಧಿಕಾರವನ್ನು ಕಿತ್ತುಕೊಂಡಿಲ್ಲ. ಅಂಥ ಒಂದು ಭಾವನೆ ಇದ್ದರೆ ಅದು ತಪ್ಪು, ತಾವು ಶುದ್ಧವಾಗಿ ಇದನ್ನು ಅರ್ಥಮಾಡಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ನಾನು ಮಾಡಿರುವುದು ಇಷ್ಟೆ, 10 ಪರ್ಸೆಂಟ್ ಎಲ್. ಆರ್. ಗ್ರ್ಯಾಂಟ್ ಏನು ಇದೆಯೋ ಅದನ್ನು ಅವರು ತಮ್ಮ ಸ್ವೇಚ್ಛಾನುಸಾರವಾಗಿ, ತಮ್ಮ ಇಷ್ಟ ಬಂದವರಿಗೆ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಯಾವುದೋ ಪ್ರಭಾವಕ್ಕೆ ಒಳಗಾಗಿ ಮನಸ್ಸಿಗೆ ಬಂದಂತೆ ಯಾರಿಗೆ ಈ ಒಂದು ಸೌಲಭ್ಯವನ್ನು ಪಡೆಯುವುದಕ್ಕೆ ಅರ್ಹತೆ ಇಲ್ಲವೋ ಅಂಥ ಜನಗಳಿಗೆ ಅಂಥ ಪ್ರದೇಶಗಳಿಗೆ ಕೊಟ್ಟುಕೊಂಡು ಬಂದಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ — ಅಂಥ ನಿದರ್ಶನಗಳು ತಮ್ಮಲ್ಲಿದ್ದರೆ, ಅವರು ಯಾವ ಉಚ್ಚ ಅಧಿಕಾರಿಯೇ ಆಗಿರಲೀ, ಅವರನ್ನು ಶಿಕ್ಷೆ ಮಾಡುವುದಕ್ಕೆ ಸರ್ಕಾರಕ್ಕೆ ಹಕ್ಕು ಇದೆ ಅಲ್ಲವೆ ?

ಶ್ರೀ ಎನ್. ರಾಚಯ್ಯ :— ಈ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನಾನು ಕಳೆದ ಹತ್ತು ವರ್ಷಗಳಿಂದ ನೋಡಿಕೊಂಡು ಬಂದಿದ್ದೇನೆ. ವಿರೋಧ ಪಕ್ಷದ ನಾಯಕರುಗಳು ಇದ್ದಾರೆ ಒ ಕಾಂಗ್ರೆಸ್ ಪಕ್ಷದ ನಾಯಕರುಗಳೂ ಇದ್ದಾರೆ. ದೇಶದ ಜನತೆಯೇ ನನಗೆ ಇವರ ಬಗ್ಗೆ ಪಿರ್ಯಾದೆ ಮಾಡಿದ್ದಾರೆ. ಇದು ನನ್ನ ಗಮನಕ್ಕೆ ಬಂದಿದೆ. ಯಾವ ಅಧಿಕಾರಿಗಳು ಇದನ್ನು ಮಾಡಿದ್ದಾರೆಯೋ ಅವರಿಗೆ ಗೊತ್ತು, ಅವರು ಏನು ಮಾಡಿದ್ದಾರೆಂದು. ಬೇಕಾದರೆ ನಾನು ವಿಚಾರಣೆ ಮಾಡಿ ವರದಿ ಮಾಡಿ ತಮ್ಮ ಮುಂದೆ ಇಡುತ್ತೇನೆ. ಇಂಥ ದೂರುಗಳು ಸಂಬಂಧಪಟ್ಟ ಗ್ರಾಮಾಂತರ ಪ್ರದೇಶದ ಜನತೆಯಿಂದ, ಹಾಗೂ ಪ್ರಾಮಾಣಿಕ ಜನರು ನನ್ನ ಗಮನಕ್ಕೆ ತಂದಿರುವುದರಿಂದ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರೆಯುವಂತೆ, ಈ ಎಲ್ ಆರ್. ಗ್ರ್ಯಾಂಟನ್ನು ಹಂಚುವಾಗ ಯಾರು ಹರಿಜನ ಗಿರಿಜನರು ಇದ್ದಾರೆ ಅವರ ಒಂದು ಊರಿನಲ್ಲಿ ಕೆರೆಗಳಿಗೆ, ರಸ್ತೆಗಳಿಗೆ ಮತ್ತು ಸಣ್ಣಪುಟ್ಟ

ಸೇತುವೆಗಳನ್ನು ಕಟ್ಟುವುದಕ್ಕೆ ಶೇಕಡ 50 ಪರ್ಸೆಂಟ್ ಹಣವನ್ನು ಖರ್ಚು ಮಾಡ ಬೇಕು ಎಂದು ಹೇಳಿದ್ದೇನೆ. ಇದನ್ನು ಗ್ರಾಮಾಂತರ ಪ್ರದೇಶದ ಸುಧಾರಣೆ ಗೋಸ್ಕರ ಗ್ರಾಮದ ಕೆಲಸ ಕಾರ್ಯಗಳಿಗೋಸ್ಕರ ಅವಶ್ಯಕವಾಗಿ ಖರ್ಚು ಮಾಡ ಬೇಕು ಎಂದು ಹೇಳಿದ್ದೇನೆ. ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ 100ಕ್ಕೆ 50 ಭಾಗ ಈ ಜನರು ಇದ್ದಾರೆ.

ಶ್ರೀ ಜಿ. ಎನ್. ಪಾಟೀಲ್ :—ದರ ಒಂದು ತಾಲ್ಲೂಕ್ ಬೋರ್ಡ್‌ಗೆ ತಾವು ಏನು ಹಣ ಕೊಟ್ಟಿದ್ದೀರಿ, ಅದನ್ನು ನಿಲ್ಲಿಸಿ ಅದನ್ನು ಸರ್ಕಾರಕ್ಕೆ ತೆಗೆದು ಕೊಂಡಿದ್ದೀರಿ. ಇದು ಸರಿಯೇ ?

ಶ್ರೀ ಎನ್. ರಾಚಯ್ಯ :—ನಾನು ಅಂಥ ನಿರ್ದೇಶನವನ್ನು ಪಾಲಿಸಿ ಮ್ಯಾಟರ್ ಆಗಿ ಡೈರೆಕ್ಷನ್ ಕೊಟ್ಟಿದ್ದೇನೆ. ಇನ್ನುಳಿದ 50 ಪರ್ಸೆಂಟ್ ಹಣವನ್ನು ಖರ್ಚು ಮಾಡುವಾಗ, ಹಣ ಸ್ವಲ್ಪ ಇದ್ದು ಸಮಸ್ಯೆಗಳು ಹೆಚ್ಚಾಗಿರುವುದರಿಂದ ಅದನ್ನು ಸರ್ಕಾರದ ಗಮನಕ್ಕೆ ತಂದು ಖರ್ಚು ಮಾಡಬೇಕು ಎಂದು ಮಾಡಿ ದ್ದೇವೆ. ಇಂಥ ಒಂದು ಅಧಿಕಾರವನ್ನು ನಾವು ಅವರಿಂದ ಕಿತ್ತುಕೊಂಡಿಲ್ಲ ಇದನ್ನು ಒಂದು ದೊಡ್ಡ ಪ್ರಚಾರವನ್ನಾಗಿ ಮಾಡಿದ್ದಾರೆ. ನಾನು ಏನು ಕೆಲಸ ಮಾಡಿದರೂ ಬಡವರ ಪರವಾಗಿ ಮಾಡಿದ್ದೇನೆ. ಅವರಿಗೆ ವಿರುದ್ಧವಾಗಿ ನಾನು ಏನಾದರೂ ಮಾಡಿದರೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಇಲ್ಲಸಲ್ಲದ ಅಪಾದನೆಗಳನ್ನು ಮಾಡುವುದು ಸರಿಯಲ್ಲ. ಹರಿಜನ ಗಿರಿಜನರಿಗೆ ಏನೂ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಹರಿಜನರನ್ನು ಪ್ರತಿನಿಧಿಸತಕ್ಕ ಹಕ್ಕು ನನಗಿಲ್ಲ ಹೇಳುವುದು, ಬಡವರಿಗೆ ಏನಾದರೂ ಮಾಡಿದರೆ ಏಕೆ ಮಾಡಿದರು ಎಂದು ಹೇಳುವುದು ಸರಿಯಲ್ಲ. ನಾನು ಮಂತ್ರಿಯಾಗಿ ಬಂದಮೇಲೆ ಅಸಿಸ್ಟೆಂಟ್ ಕಮಿಷನರ್ ಆಗಲೀ, ಡೆಪ್ಯೂಟಿಕಮಿಷನರ್ ಆಗಲೀ ಈ ಒಂದು ನಿರ್ದೇಶನವನ್ನು ಜಾರಿಗೆ ಕೊಡುವುದಿಲ್ಲ ಅಂಥವರನ್ನು ತೆಗೆದುಹಾಕುತ್ತೇವೆ. ಈ ವಿಚಾರದಲ್ಲಿ ನನಗೆ ಸಂಪೂರ್ಣಮಾಹಿತಿ ಇದೆ. ಯಾರು ಸರಿಯಾಗಿ ಕಾನೂನನ್ನು ಜಾರಿಗೆ ಕೊಡುವು ದಿಲ್ಲ, ಯಾರು ರಾಜ್ಯಾಂಗಬದ್ಧವಾದ ನಿಯಮಗಳ ಪ್ರಕಾರ ಆಯಾವರ್ಗದವರಿಗೆ ರಕ್ಷಣೆ ಕೊಡಬೇಕೋ ಅದನ್ನು ಕೊಡದಿದ್ದರೆ ಅವರನ್ನು ಕೆಲಸದಿಂದ ತೆಗೆದುಹಾಕು ವುದು ಅಷ್ಟೇಅಲ್ಲ ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಬೇಕು. that should be treated as an offence. ಇದನ್ನು ಅಬ್ಯೂಸ್ ಆಫ್ ಪವರ್ಸ್ ಎಂದು ಹೇಳಬೇಕಾಗುತ್ತದೆ. Abuse of power and misappropriation of funds. ಕೋಟಿ ಗಟ್ಟಲೆ ಹಣ ಪಟ್ಟಭದ್ರ ಹಿತಾಸಕ್ತಿಗಳ ಮನೋಪಲಿ ಯಾಗಿದೆ. ಯಾರು ಮಾಡಿದ್ದಾರೆ ಇಂಥ ಕೆಲಸವನ್ನು ? ಯಾವ ಅಧಿಕಾರಿಗಳು ಇಂಥಾದ್ದಕ್ಕೆ ಅವಕಾಶ ಕೊಟ್ಟರು ? ಹರಿಜನ ಅಧಿಕಾರಿಗಳು ಇದಕ್ಕೆ ಅವಕಾಶ ಕೊಟ್ಟರೆ ? ನಿಷ್ಪಕ್ಷಪಾತವಾಗಿ ಹೇಳೋಣ, ನಿರ್ಭಯವಾಗಿ ಹೇಳೋಣ ಅವನು

(ಶ್ರೀ ಎನ್. ರಾಚಯ್ಯ)

ಯಾವನೇ ಆಗಲೀ ಅಂಥವನನ್ನು ಶಿಕ್ಷೆ ಮಾಡ್ಬೋಣ, ತಮ್ಮವರು ಅಧಿಕಾರಕ್ಕೆ ಬಂದಾಗ ಒಂದು ಮಾಡುವುದು, ಇನ್ನೊಬ್ಬರು ಅಧಿಕಾರಕ್ಕೆ ಬಂದಾಗ ಇನ್ನೊಂದು ರೀತಿ ಮಾಡುವುದು. ಇಂಥ ಸನ್ನಿವೇಶ ಹೀಗೆಯೇ ನಡೆದುಕೊಂಡು ಬಂದರೆ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಲಿಕ್ಕೆ ಸಾಧ್ಯವಿಲ್ಲ. ಯಾವುದಾದರೂ ಅಯೋಗ್ಯ ಮುಖಂಡತ್ವ ಬಂದಾಗ ಅದು ಏನೂ ಮಾಡಿದರೂ ಮುಚ್ಚಿಕೊಳ್ಳುವುದು, ಒಳ್ಳೆಯವರು ಬಂದಾಗ ಅವರನ್ನು ಬೈಯುವುದು. ರಾಜ್ಯಾಂಗದ ರಕ್ಷಣೆಯ ಬಗ್ಗೆ ಇವತ್ತು ಯಾರಾದರೂ ಅನಾವಶ್ಯಕವಾದ ಪ್ರವೃತ್ತಿ ಮಾಡತಕ್ಕವರಿದ್ದರೆ ಅಂಥವರಿಗೆ ಪಾಠಕಲಿಸುವ ಕಾಲ ಬಂದಿದೆ, ಅದಕ್ಕೆ ಉತ್ತರ ಕೊಡುವ ಕಾಲ ಇದಲ್ಲ ಎಂದು ನಾನು ಹೇಳುತ್ತೇನೆ. ತಪ್ಪು ಮಾಡಿದರೆ, ಕಾನೂನು ಪ್ರಕಾರ, ನಿಯಮಗಳ ಪ್ರಕಾರ ಅಂಥವರನ್ನು ಬಲಿ ಹಾಕುತ್ತೇವೆ. ಆದ್ದರಿಂದ ಇಲ್ಲಿ ಸುಮ್ಮನೆ ಬೇಜವಾಬ್ದಾರಿಯಿಂದ ಲೋಕಾರೂಢಿಯಾಗಿ ಮಾತನಾಡುವುದು ಸರಿಯಲ್ಲ.

ಶ್ರೀ ಎಂ ಎಸ್ ಕೃಷ್ಣನ್ :— ಈ ಒಂದು ಧೈರ್ಯವನ್ನು ನಿರ್ಮಲ ಇಂಜನಿಯರಿಂಗ್ ಕಂಪನಿ ವಿಷಯದಲ್ಲಿ ತೋರಿಸಬೇಕಾಗಿತ್ತು.

ಶ್ರೀ ಎನ್ ರಾಚಯ್ಯ :—ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ ನಿರ್ಮಲ ಇಂಜನಿಯರಿಂಗ್ ವಿಚಾರದ ಬಗ್ಗೆ ಹೇಳುವುದಾದರೆ ಈ ಪಂಪುಸೆಟ್ಟುಗಳ ವ್ಯವಹಾರ 1967ನೇ ಇಸವಿಯಲ್ಲಿ ಹಿಂದಿನ ಸರ್ಕಾರದಲ್ಲಿ ನಡೆದಿರುವುದು. 5-6 ತಿಂಗಳಿಂದ ಇದು ನನ್ನ ಇಲಾಖೆಗೆ ಬಂದಿರುವುದು. ನೀವು ಈ ದಿವಸ ಆದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದುವರೆಗೆ ನಾನು ಆ ಬಗ್ಗೆ ಒಂದು ಎಸ್ಟಿ ಮೇಟನ್ನೂ ಕೂಡ ಮಂಜೂರು ಮಾಡಿಲ್ಲ. ಆದುದರಿಂದ ಇದರ ಬಗ್ಗೆ ನನಗೆ ಹೆಚ್ಚಿಗೆ ಗೊತ್ತಿಲ್ಲ. ನೀವು ಮುಂದೆ ಬಂದು ಈ ಬಗ್ಗೆ ಏನಾದರೂ ಹೇಳುವುದಾದರೆ ಅದನ್ನು ಕೇಳಿ ಮಾಡೋಣ.

ಮಾನ್ಯ ಅಧ್ಯಕ್ಷರೇ, ಇನ್ನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಾದರೆ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಏತಕ್ಕಾಗಿ ಎಂದರೆ ರಾಜ್ಯಾಂಗ ದಲ್ಲಿ ಗಂಡಸರಿಗೆ ಇರತಕ್ಕಂಥ ಸಮಾನವಾದ ಹಕ್ಕು ಭಾದ್ಯತೆಗಳು ಅವಕಾಶ ಹೆಂಗಸ ರಿಗೂ ಇದರಲ್ಲಿ ಇರುವುದರಿಂದ ನಾವು ಅದನ್ನು ಪ್ರತ್ಯೇಕ ಮಾಡಿ ಆ ಒಂದು ಇಲಾಖೆಯನ್ನೇ ಡೈರೆಕ್ಟೋರೇಟ್ ಮಾಡುವುದಕ್ಕೆ ಇದರಲ್ಲಿ ಎಷ್ಟರಮಟ್ಟಿಗೆ ಕಾನೂನು ಪ್ರಕಾರ ಸಾಧ್ಯ ಇದೆ ಎನ್ನುವುದನ್ನು ನಾವು ಕೇಂದ್ರ ಸರ್ಕಾರದಿಂದ ಸಲಹೆ ಪಡೆದು, ಅವರಿಂದ ಅಪೇಕ್ಷೆ ಪಡೆದು ಮಾಡುವಂಥ ವಿಚಾರ. ಅದನ್ನು ಮಾಡಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಏತಕ್ಕೆಂದರೆ ಅವರು

ಯಾವ ವರ್ಗದವರೇ ಆಗಿರಲಿ ಅವರಿಗೆ ಶಿಕ್ಷಣ ಸೌಲಭ್ಯ ಇನ್ನು ಯಾವ ಯಾವ ವಿಶೇಷ ಸೌಲಭ್ಯ ಇದೆಯೋ ಅದನ್ನು ಕೊಟ್ಟರೆ ಅವರು ಅಭಿವೃದ್ಧಿಯಾಗುತ್ತಾರೆ ಅಷ್ಟೇ ಅಲ್ಲದೆ ಅವರಲ್ಲಿ ಒಂದು ಸಂಘಟನೆಯೂ ಬರುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ :—ಇದು ಕೇಂದ್ರ ಸರ್ಕಾರಕ್ಕೆ ಸಂಬಂದಪಟ್ಟದ್ದು ಅಂತ ಹೇಳುವುದಾದರೆ ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿದೆಯೋ ಇಲ್ಲವೋ

ಶ್ರೀ ಎನ್. ರಾಚಯ್ಯ :— ಕೇಂದ್ರ ಸರ್ಕಾರಕ್ಕೆ ಇದು ಯಾವಾಗ ಸಂಬಂಧ ಪಟ್ಟಿದೆಯೋ ಆಗಲೇ ರಾಜ್ಯ ಸರ್ಕಾರಕ್ಕೂ ಸೇರಿದ್ದಾಗಿದೆ. ಆ ರೀತಿಯಾಗಿ ರಾಜ್ಯಾಂಗದಲ್ಲಿ ಅವರಿಗೆ ಯಾವ ರೀತಿಯಾಗಿ ಹಕ್ಕುಭಾದ್ಯತೆಗಳು ಇವೆ ಎನ್ನುವುದು ಮಾನ್ಯ ಪುಟ್ಟಸ್ವಾಮಿಯವರಿಗೆ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿದೆ. ಆದರೆ ಅವರು ಸೆಂಟ್ರಲ್ ವುಮೆನ್ ಸೋಷಿಯಲ್ ವೇಲ್‌ಫೇರ್ ಬೋರ್ಡ್ ಅಂತ ಮಾಡಿದ್ದಾರೆ. ರಾಜ್ಯದಲ್ಲಿ ಯಾವ ಮಹಿಳಾಮಂಡಲಿಯೇ ಆಗಲಿ ಮತ್ತು ಮಕ್ಕಳ ಸಂಸ್ಥೆಗಳೇ ಆಗಲಿ ಅವರಿಂದ ಒಂದು ನಿರ್ದಿಷ್ಟವಾದ ಸಹಾಯವನ್ನು ಪಡೆಯ ಬೇಕು. ಈ ಒಂದು ಧೋರಣೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಮಹಿಳಾ ಮಂಡಲಿಯವರು ಹೋಗುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿರ ತಕ್ಕಂಥ ಈ ಸೋಷಿಯಲ್ ವೆಲ್‌ಫೇರ್ ಬೋರ್ಡ್ ಏನು ಇದೆ ಅದಕ್ಕೆ ಕೇಂದ್ರ ದವರು ಸಹಾಯವನ್ನು ಕೊಡುತ್ತಾ ಇದ್ದರು. ಕಳೆದ ವರ್ಷ ಏನಾಯಿತು ಎಂದರೆ ಇದನ್ನು ರಾಜ್ಯ ಸರ್ಕಾರದವರೇ ನಡೆಸ ಬೇಕು ಅಂತ ಹೇಳಿದರು. ಅದೇ ರೀತಿಯಾಗಿ ರಾಜ್ಯ ಸರ್ಕಾರದವರು ನಡೆಸಿಕೊಂಡು ಹೋಗುತ್ತಿದ್ದಾರೆ. ಶ್ರೀಮತಿ ಮಡಿಮನ್ ಅವರು ಹೇಳಿದ ಹಾಗೆ ಕೇಂದ್ರ ಸರ್ಕಾರದವರು ಈ ಬಗ್ಗೆ ಒಂದು ಕಾರ್ಪೋರೇಷನ್ ಮಾಡಿ ಹೆಣ್ಣು ಮಕ್ಕಳ ಅಭಿವೃದ್ಧಿ ಬಗ್ಗೆ ಮತ್ತು ಸಣ್ಣಮಕ್ಕಳ ಒಂದು ಅಭಿವೃದ್ಧಿ ಬಗ್ಗೆ ಏನು ಮಾಡ ಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದ್ದಾರೆ. ಆದುದರಿಂದ ನಾವು ಕೇಂದ್ರ ಸರ್ಕಾರದವರಿಂದ ಏನು ಆದೇಶ ಬರುತ್ತದೋ ಎನ್ನುವುದನ್ನು ನಿರೀಕ್ಷಣೆ ಮಾಡು ತ್ತಿದ್ದೇವೆ ಈಗ ಇರತಕ್ಕಂಥ ಕಾರ್ಯಕ್ರಮದ ಪ್ರಕಾರ ಇದಕ್ಕೆ ಸಂಬಂಧ ಪಟ್ಟಂತೆ ಸ್ಟೇಟ್ ವುಮೆನ್ಸ್ ಸೋಷಿಯಲ್ ವೆಲ್‌ಫೇರ್ ಬೋರ್ಡ್ ಪೂರ್ತಾ ಹೊಣೆ ಹೊತ್ತು ಅದರ ಮೂಲಕ ಸ್ಟೇಟ್ ಹೋಮ್, ಸರ್ಟಿಫೈಡ್ ಸ್ಕೂಲ್ಸ್ ಮತ್ತು ಕರೆಕ್ಷನಲ್ ಸೆಂಟರ್ಸ್ ಇವನ್ನೆಲ್ಲಾ ನಡೆಸಿಕೊಂಡು ಹೋಗಬೇಕಾಗುತ್ತದೆ. ಆದು ದರಿಂದ ಇದಕ್ಕೆ ಸಪರೇಟ್ ಡೈರೆಕ್ಟೋರೇಟ್ ಮಾಡಬೇಕಾದರೆ ಇದನ್ನು ಅಷ್ಟು ಸುಲಭವಾಗಿ ಮಾಡುವುದಕ್ಕಾಗುವುದಿಲ್ಲ ಇದಕ್ಕೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ನವರಿಂದ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟಿನವರಿಂದ ಒಪ್ಪಿಗೆ ಬೇಕಾಗುತ್ತದೆ. ಆದುದರಿಂದ ಇದಕ್ಕೆ ಕೇಂದ್ರ ಸರ್ಕಾರದವರ ಒಂದು ಸಲಹೆ ಪಡೆಯದೇ

(ಶ್ರೀ ಎನ್. ರಾಚಯ್ಯ)

ನಾವೇನೂ ಹೇಳುವುದಕ್ಕಾಗುವುದಿಲ್ಲ ಒಟ್ಟಿನಲ್ಲಿ ಹೇಳುವುದಾದರೆ ನಾವು ಹೆಣ್ಣು ಮಕ್ಕಳ ಮತ್ತು ಸಣ್ಣ ಮಕ್ಕಳ ವಿಚಾರದಲ್ಲಿ ಆದ್ಯತೆ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿಗಳ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಮತ್ತು ಡೆವಲಪ್‌ಮೆಂಟ್ ಬೋರ್ಡ್‌ನ್ನು ಒಂದು ಪ್ರತ್ಯೇಕವಾದ ಡೈರೆಕ್ಟೋರೇಟ್ ಮಾಡಬೇಕು ಹಾಗೆ ಮಾಡ ಬೇಕು, ಹೀಗೆ ಮಾಡಬೇಕು ಅಂತ ಕತೆ ಹೇಳಿದ್ದಾರೆ. ಆ ಕತೆಯೆಲ್ಲಾ ಬರೀ ಅಸೂಯೆಗೊಂಡದ್ದೇ ವಿನಾ ಇನ್ನೇನೂ ಅಲ್ಲ. ಏನಾದರೂ ಮಾಡಿ ಅಪಪ್ರಚಾರ ಮಾಡಿ, ಮುಖಕ್ಕೆ ಮಸಿ ಬಳಿಯಬೇಕು ಅಂತ ಮಾಡುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ಈ ಇಲಾಖೆಗೆ ನೇರವಾಗಿ ಸಂಬಂಧಿಸ ತಕ್ಕಂಥಾದ್ದು ಬಿ. ಡಿ. ಓ. ಗೆ ಮಾತ್ರ. ಈಗ ನಾನು ಏನು ಮಾಡಿದ್ದೇನೆ ಎಂದರೆ ಪಿ. ಎಸ್. ಸಿ. ಯವರು 157 ಜನರನ್ನು ಪ್ರೊಬೇಷನರನ್ನು ಏನು ತೆಗೆದುಕೊಳ್ಳು ತ್ತಾರೋ ಅದರಲ್ಲಿ ಎರಡು ಪೋಸ್ಟನ್ನು ನಮ್ಮ ಇಲಾಖೆಗೆ ಪ್ರತ್ಯೇಕವಾಗಿ ಕೊಡಿ ಎಂದು ಕೇಳಿದ್ದೇನೆ. ಈ ರೀತಿಯಾಗಿ ಕ್ಲಾಸ್ ಒನ್ ಗ್ರೇಡ್‌ನಲ್ಲಿರತಕ್ಕವರನ್ನು ನಮ್ಮ ಇಲಾಖೆಗೆ ಇಬ್ಬರನ್ನು ಆಯ್ಕೆ ಮಾಡಿಕೊಡಿ ಎಂದು ಕೇಳಿದ್ದೇವೆ. ಅವರು ಒಪ್ಪಿಕೊಂಡಿದ್ದಾರೆ. ಈಗಾಗಲೇ ಅವರು ಈ ಬಗ್ಗೆ ಅರ್ಜಿಯನ್ನು ಕರೆದಿದ್ದಾರೆ. ಮೊದಲು ತಾಲ್ಲೂಕು ಬೋರ್ಡ್‌ನವರು ಏನು ಮಾಡುತ್ತಿದ್ದರು ಎಂದರೆ ಅವರೇ ನೇಮಿಸಿಕೊಳ್ಳುತ್ತಿದ್ದರು ಅದು ನನಗೂ ಗೊತ್ತಿದೆ, ಕೆಲವು ಸಿಬ್ಬಂದಿ ವರ್ಗದ ವರನ್ನು ಅವರೇ ನೇಮಿಸಿಕೊಳ್ಳುತ್ತಿದ್ದರು, ಕೆಲವರನ್ನು ಬೇರೆ ಡಿಪಾರ್ಟ್‌ಮೆಂಟಿ ನಲ್ಲಿ ಕೆಲಸ ಮಾಡತಕ್ಕಂಥಾವರನ್ನು ಡೆಪ್ಯೂಟೇಷನ್ ಮೇಲೆ ತಾಲ್ಲೂಕು ಬೋರ್ಡು ನವರು ತೆಗೆದುಕೊಳ್ಳುತ್ತಿದ್ದರು. ಬಿ. ಡಿ. ಆಫೀಸರ ಕೈಕೆಳಗೆ ಕೆಲಸ ಮಾಡ ತಕ್ಕಂಥ ರೆವಿನ್ಯೂ ಅಧಿಕಾರಿಗಳು ಏನು ಇದ್ದಾರೋ ಅವರ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ ಬರೆಯಬೇಕಾದರೆ ಅಲ್ಲಿರುವ ಬಿ. ಡಿ. ಓ. ಬರೆಯಬೇಕು. ಅವನ ಬಗ್ಗೆ ಕಾನ್‌ಫಿಡಿನ್ಸಿಯಲ್ ರಿಪೋರ್ಟ್ ಬರೆಯತಕ್ಕಂಥಾದ್ದು ಅವನ ಒಂದು ಕರ್ತವ್ಯ. ಏತಕ್ಕೆಂದರೆ ಇವನು ಎಷ್ಟರಮಟ್ಟಿಗೆ ಒಳ್ಳೆಯ ಕೆಲಸ ಮಾಡುತ್ತಾನೆ ಎನ್ನುವುದು ಅವರಿಗೆ ಗೊತ್ತಾಗುತ್ತದೆ. The Assistant Commissioner is not omni present ಆದರೆ ಅಸಿಸ್ಟೆಂಟ್ ಕಮೀಷನರ್‌ರವರು ಬಂದು ಸೂಪರ್ ವಿಷನ್ ಮಾಡಿ ಅವನು ಏನು ಕೆಲಸ ಮಾಡುತ್ತಾನೆ ಎಂದು ವೀಕ್ಷಣೆ ಮಾಡಿ ಕೊಂಡು ಹೋಗಬಹುದು. ಕಾನ್‌ಫಿಡೆನ್ಸಿಯಲ್ ರಿಪೋರ್ಟನ್ನು ಆ ಅಧಿಕಾರಿಯೇ ಬರೆಯಬೇಕು ಅಂತ ಹೇಳಿದೆ. ಡೆಪ್ಯೂಟಿ ಕಮೀಷನರ್‌ರವರೂ ಕೂಡ ಬರೆಯ ಬಹುದು. ಈಗ ಸಂಬಂಧಪಟ್ಟ ಮೀನುಗಾರಿಕೆಯ ಎಕ್ಸ್‌ಟೆನ್‌ಷನ್ ಆಫೀಸರೇ

ಇರಲಿ, ವ್ಯವಸಾಯ ಇಲಾಖೆಯ ಎಕ್ಸ್‌ಟೆನ್‌ಷನ್ ಆಫೀಸರೇ ಇರಲಿ ಅಥವಾ ಅನಿಮಲ್ ಹಸ್ಬೆಂಡರಿ ಇಲಾಖೆಯ ಎಕ್ಸ್‌ಟೆನ್‌ಷನ್ ಆಫೀಸರೇ ಇರಲಿ ಅವರು ಅಲ್ಲಿ ಕೆಲಸ ಮಾಡುವುದರಿಂದ ಅವರುಗಳ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ ಬಿ. ಡಿ. ಓ. ಬರೆಯಬೇಕು ಅಂತ ಹೇಳಿದೆ. ಡೆಪ್ಯೂಟೀ ಕಮೀಷನರೂ ಕೂಡ ಬರೆಯ ಬಹುದು. ಇದನ್ನು ಏತಕ್ಕೆ ಹೇಳಿದೆ ಎಂದರೆ ಅವರು ಆ ಆಫೀಸರ ಒಂದು ಹತೋಟಿಯಲ್ಲಿ ಇರಬೇಕು ಅಂತ ಮಾಡಿದನೇ ಹೊರತು ರೆವಿನ್ಯೂ ಅಧಿಕಾರಿಗಳಿಂದ ಈ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ ಬರೆಯುವುದನ್ನು ಕಿತ್ತುಹಾಕಬೇಕು ಎನ್ನುವ ಉದ್ದೇಶದಿಂದ ಮಾಡಿಲ್ಲಾ. ಹಾಗಾದರೆ ನೀವು ಹೇಳಿದ ಹಾಗೆ ಇದನ್ನು ರೆವಿನ್ಯೂ ಇನ್‌ಸ್ಪೆಕ್ಟರಿಗೆ ಕೊಡೋಣವೇ ಹೇಳಿ. ಅವರು ಒಂದನೇ ದರ್ಜೆ ಅಧಿಕಾರಿಗಳಾ ಗಿದ್ದರೆ ಸರಿ. ಬಿ. ಡಿ. ಓ. ಅವರು ಎರಡನೇ ದರ್ಜೆಯ ಅಧಿಕಾರಿಗಳಾಗಿದ್ದಾರೆ. ಅವರಿಗೆ ಸಾಕಷ್ಟು ಕೆಲಸ ಗೊತ್ತಿದೆ, ಆದುದರಿಂದ ಆಯಾಯ ಇಲಾಖೆಯವರಿಗೆ ಈ ಅಧಿಕಾರ ಕೊಡತಕ್ಕಂಥಾದ್ದು ಸೂಕ್ತ ಎಂದು ತಿಳಿದುಕೊಂಡು ಆ ಅಧಿಕಾರವನ್ನು ಕೊಟ್ಟಿದ್ದೇನೆ. ಮತ್ತು ಇದರ ಬಗ್ಗೆ ಯಾರು ಏನು ಆಕ್ಷೇಪಣೆ ಮಾಡಿದರೂ ಅದು ಆಧಾರರಹಿತವಾದದ್ದು ಎಂದು ಹೇಳುತ್ತೇನೆ. ಇನ್ನು ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ನಾಯಿಡುರವರು ಹೇಳಿದರು. ಸಮಾಜ ಕಲ್ಯಾಣ ಇಲಾಖೆಗೆ ಹಣ ಸಿಗುವುದು ಬಹಳ ಕಡಿಮೆ ಅದನ್ನು ಹೆಚ್ಚು ಮಾಡಬೇಕು ಎಂದು. ಅದಕ್ಕೆ ತಮಗೆ ಹೇಳಬೇಕು ಎಂದರೆ ಈ ವರ್ಷ ಡೀನೋಟಿಫೈಡ್ ಟ್ರೈಬ್ಸ್‌ಗೆ 14 ಲಕ್ಷ ರೂಪಾಯಿ ಬಡ್ಜೆಟ್‌ನಲ್ಲಿ ಇಲ್ಲದೇ ಇದ್ದರೂ ಕೂಡ ಶ್ರೀಮಾನ್ ಘೋರ್ಪಡೆಯವರು ರಿಲೀಸ್ ಮಾಡಿಕೊಟ್ಟರು. ಮಠಾಧಿಪತಿಗಳು ಮತ್ತು ದೊಡ್ಡ ದೊಡ್ಡ ಮ್ಯಾನೇಜ್‌ಮೆಂಟ್‌ನವರು ಎಲ್ಲರೂ ಕೂಡ ನನಗೆ ಭೇಷ್‌ಗಿರಿ ಕೊಡುತ್ತಿದ್ದಾರೆ. ಏತಕ್ಕೆಂದರೆ ಇವರ ಕಾಲದಲ್ಲಿ ಬಹಳ ಮಕ್ಕಳಿಗೆ ಇಂಥಾ ಅನುಕೂಲ ಸಿಕ್ಕುತ್ತಾ ಇದೆಯಲ್ಲಾ ಎಂದು. ಬಡ್ಜೆಟ್ ಪ್ರಾವಿಷನ್ ಇರುವುದರಿಂದ ಪ್ರತಿಯೊಂದು ವರ್ಗದ ಬಡವರಿಗೆ, ಹೆಣ್ಣು ಮಕ್ಕಳಿಗೆ ಮತ್ತು ವಿಶೇಷವಾದ ರಕ್ಷಣೆ, ವಿಶೇಷವಾದ ಅನುಕೂಲಗಳನ್ನು ಮಾಡಿಕೊಡು ತ್ತಿದ್ದೇವೆ. ಹಿಂದುಳಿದ ವರ್ಗದವರಿಗೂ ಈ ಸಲದ ಬಡ್ಜೆಟ್‌ನಲ್ಲಿ ಸಾಕಷ್ಟು ಹಣ ವನ್ನು ಒದಗಿಸಿಕೊಟ್ಟಿದ್ದಾರೆ. ಅದರ ಮುಂದಿನ ಸಲ ಇದಕ್ಕಿಂತಲೂ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿಕೊಡುತ್ತಾರೆ. ಎಂದು ಹೇಳಿ, ಇಷ್ಟು ಮಾತು ಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ ಮತ್ತು ಈ ಮಾನ್ಯ ಸಭೆಗೂ ವಂದಿಸಿ ಮತ್ತು ಮಾನ್ಯ ಸದಸ್ಯರುಗಳು ಕೊಟ್ಟ ಸಲಹೆಗಳನ್ನು ನಾನು ಸಂಪೂ ರ್ಣವಾಗಿ ಸ್ವಾಗತ ಮಾಡಿ, ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER :—The question is :

"That the Karnataka Appropriation (No. 2) Bill, 1975 be taken into consideration."

The motion was adopted

Clauses 2, 3 and Schedule

MADAM SPEAKER.—The question is

"That clauses 2 and 3 and the Schedule do stand part of the Bill."

The motion was adopted

Clauses 2 and 3 and the Schedule were added to the Bill.

Clause 1 etc.

MADAM SPEAKER.—The question is :

"That clause 1, the long title, the preamble and the Enacting formula do stand part of the Bill."

The motion was adopted

Clause 1, the long title, the preamble and the Enacting formula were added to the Bill.

Motion to Pass

SRI M. Y. GHORPADE :—Madam I beg to move :

"That the Karnataka Appropriation (No. 2) Bill, 1975 be passed."

MADAM SPEAKER : —The question is :

'That the Karnataka Appropriation (No. 2) Bill 1975, be passed.

The motion was adopted and the Bill was passed.

The House will now adjourn to meet at 1 P. M. on Monday, the 31st March 1975.

The House adjourned at Thirty Minutes past Five of the Clock to meet at One of the Clock on Monday, the 31st March, 1975.